ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಆಗಸ್ಟ್ 2019 ಮಾಸ ಪತ್ರಿಕೆ

ಸಂಪುಟ/Volume : 41
ಸಂಚಿಕೆ/Issue : 11
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | August 2019 | Monthly

ನಮ್ಮಲ್ಲಿ
ಚಿಂತನಶೀಲತೆಯನ್ನು
ಬೆಳೆಸುವವವರೇ
ನಿಜವಾದ
ಶಿಕ್ಷಕರು



**ಡಾ. ಸರ್ವೆಪಲ್ಲಿ ರಾಧಾಕೃಷ್ಣನ್**
05-09-1888 | 17-04-1975

ಪದವಿ
ಪ್ರಜಾಸೇವೆಗೆ
ಹೊರತು
ಸ್ವಂತ
ಲಾಭಕ್ಕಾಗಿ
ಅಲ್ಲ



**ಸರ್. ಎಂ. ವಿಶ್ವೇಶ್ವರಯ್ಯ**
15-09-1861 | 12-04-1962



11–8–2019 ರಂದು ನಡೆದ ಕಾರ್ಯಕಾರಿಣಿ ಚುನಾವಣೆಯಲ್ಲಿ 3 ವರ್ಷದ ಅವಧಿಗೆ ಆಯ್ಕೆಯಾದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಚುನಾಯಿತರೊಂದಿಗೆ ಸಂಘದ ಪ್ರಮುಖರು

A Journal of Karnataka State Secondary Teachers' Association

# ಖಂಡ ಖಂಡವಾದ ಅಖಂಡ ಭಾರತ

ದೇಶ ವಿಭಜನೆ ಎಂದರೆ ಕೇವಲ ಭೂಮಿಯ ವಿಭಜನೆಯಲ್ಲ, ಜನರ ಭಾವನೆಗಳ ವಿಭಜನೆ. ಸ್ವತಂತ್ರ್ಯ ಭಾರತದ ಬಂಗಾರದ ಭವಿಷ್ಯದ ಆಸೆಯಲ್ಲಿ ದೇಶವಿಭಜನೆಯ ವಿಷವನ್ನು ಭಾರತೀಯರು ಕುಡಿಯಬೇಕಾಯಿತು. ದೇಶವಿಭಜನೆ ಅಷ್ಟೊಂದು ಅವಶ್ಯಕತೆಯಿತ್ತೇ? ಎಂಬುದಕ್ಕೆ ಇಂದಿಗೂ ಉತ್ತರ ಸಿಕ್ಕಿಲ್ಲ. ದೇಶ ವಿಭಜನೆಯ ನೋವು ಎಂತಹುದು ಎಂದು ಅನುಭವಿಸಿದವರಿಗೆ ಗೊತ್ತು. ಒಂದು ಕುಟುಂಬ ವಿಭಜನೆಯಾದರೆ ಸಹಿಸಲಾಗದ ನೋವು ಸಾಯುವವರೆಗೆ ಕಾಡುತ್ತದೆ. ಇನ್ನು ದೇಶದ ವಿಭಜನೆಯ ನೋವನ್ನು ಇಂದಿಗೂ ಮರೆಯಲು, ಸಹಿಸಲು ಅಸಾಧ್ಯ. ಬ್ರಿಟಿಷರು ಒಡೆದು ಆಳುವ ನೀತಿಯ ನಿಯಮವನ್ನು ಭಾರತವನ್ನು ಬಿಟ್ಟು ಹೋಗುವಾಗಲೂ ಅನುಸರಿಸಿ ಅನೇಕ ಲಾಭಗಳನ್ನು ಪಡೆದುಕೊಂಡರು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರ ದೇಶಪ್ರೇಮಿಗಳಾರು ದೇಶವಿಭಜನೆಯ ಮಾತನ್ನು ಕನಸಿನಲ್ಲಿಯೂ ನೆನಸಿರಲಿಲ್ಲ. ಸ್ವಪ್ರತಿಷ್ಠೆ, ಅತಿಯಾದ ತೋರಿಕೆಯ ಒಳ್ಳೆತನ, ನಾಯಕ-ನಾಯಕರಲ್ಲಿನ ಮತಾನುಭೇದ, ಕೆಲವೇ ಧರ್ಮಹಿತಾಸಕ್ತಿಯುಳ್ಳ ಟೊಳ್ಳು ನಾಯಕರ ಆಸೆಯಿಂದ ಅಖಂಡ ಭಾರತವೆಂಬುದು ಭಾರತ ಮತ್ತು ಪಾಕಿಸ್ತಾನವಾಗಿ ಬೇರ್ಪಟ್ಟಿತು. ಇವರಿಗೆಲ್ಲಾ ಭೂಮಿಯ ಬೇರ್ಪಡಿಸುವಿಕೆ ಮಾತ್ರ ಕಾಣಿಸಿರಬಹುದು. ಆದರೆ ಈ ಘನಕಾರ್ಯದಿಂದ ಎಷ್ಟೋ ಜನರು ತಮ್ಮ ಮನೆ, ಭೂಮಿ, ತಮ್ಮ ಸಂಬಂಧಿಕರು ಎಲ್ಲವನ್ನು ಕಳೆದುಕೊಂಡು ಅನ್ಯ ಸ್ಥಳಕ್ಕೆ ಹೋಗಬೇಕಾಗಿ ಬಂತು. ಭಾರತೀಯರು ಅನ್ಯಧರ್ಮ ಸಹಿಷ್ಣುತಾ ಮನೋಭಾವದಿಂದ ಎಲ್ಲಾ ಧರ್ಮದವರಿಗೂ ಇಲ್ಲಿ ಇರಲು ಅವಕಾಶ ಮಾಡಿಕೊಟ್ಟರು. ಆದರೆ ಪಾಕಿಸ್ತಾನದವರು ಅನೇಕರನ್ನು ಒತ್ತಾಯಪೂರ್ವಕವಾಗಿ ಹೊರದಬ್ಬಿದರು. ದೊಂಬಿ, ಗಲಾಟೆಗಳಲ್ಲಿ ಅನೇಕರು ಪ್ರಾಣತೆತ್ತರು. ಅಖಂಡವಾಗಿರುವುದನ್ನು ಖಂಡವಾಗಿಸುವುದನ್ನು ಸುಲಭದ ಕೆಲಸ ಮಾಡಿಕೊಂಡರು ಅಂದಿನ ದೊಡ್ಡ ದೊಡ್ಡ ನಾಯಕರು ತಮ್ಮ ದಡ್ಡತನದಿಂದ. ಆದರೆ ಅದನ್ನೇ ಅಖಂಡವನ್ನಾಗಿ ಮಾಡುವುದು ಅಸಾಧ್ಯವಾದ ಮಾತು. ಖಂಡವಾಗಿದ್ದರಿಂದ ಅನುಭವಿಸಬೇಕಾದ ನೋವುಗಳು ಅಷ್ಟಿಷ್ಟಲ್ಲ. ಇದಕ್ಕೆ ಕಾರಣಕರ್ತರಾದ ಮಹಾನುಭಾವರು ಸ್ವಲ್ಪವಾದರೂ ದುರಾಲೋಚನೆ ಬಿಟ್ಟು ದೂರಾಲೋಚನೆ ಮಾಡಿದ್ದರೆ ಅಖಂಡ ಭಾರತ ಎಂದಿಗೂ ಖಂಡವಾಗುತ್ತಿರಲಿಲ್ಲ.

## ಶಿಕ್ಷಕರ ದಿನಾಚರಣೆ

ಭಾರತದ 2ನೇ ರಾಷ್ಟ್ರಪತಿಗಳು, ಶಿಕ್ಷಣತಜ್ಞರಾದ ಸರ್ವೇಪಲ್ಲಿ ರಾಧಾಕೃಷ್ಣನ್‌ರವರಿಗೆ 131 ನೇ ವರ್ಷದ ಜನ್ಮದಿನದ ಶುಭಾಶಯಗಳು. ಶಿಕ್ಷಕರ ದಿನಾಚರಣೆಯ ಪ್ರಯುಕ್ತ ನಮ್ಮ ಎಲ್ಲಾ ಶಿಕ್ಷಕ ಬಂಧುಗಳಿಗೆ ಆತ್ಮೀಯತೆಯ ಶುಭಾಶಯಗಳು.

ಮಹಾನ್ ಶಿಕ್ಷಕರು, ಶಿಕ್ಷಣ ತಜ್ಞರಾದ ಸರ್ವಪಲ್ಲಿ ರಾಧಾಕೃಷ್ಣನ್‌ರವರು ತಮ್ಮ ಜನ್ಮದಿನವನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಬೇಕೆಂದು ಬಯಸಿ ಶಿಕ್ಷಕರ ಗೌರವವನ್ನು ದುಪ್ಪಟ್ಟು ಮಾಡಿದರು. ಗೌರವ, ಸನ್ಮಾನಗಳೆಲ್ಲವೂ ಜವಾಬ್ದಾರಿಯನ್ನು ಹೆಚ್ಚಿಸುತ್ತವೆ ಎಂಬುದನ್ನು ನಾವೆಲ್ಲರೂ ಮರೆಯಬಾರದು. ಶಿಕ್ಷಕರ ದಿನದಂದು ವಿದ್ಯಾರ್ಥಿಗಳಿಂದ, ಪೋಷಕರಿಂದ, ಸಮಾಜದಿಂದ ಸಾಮೂಹಿಕವಾಗಿ ಗೌರವವನ್ನು, ಸನ್ಮಾನವನ್ನು ಸ್ವೀಕರಿಸುತ್ತೇವೆ. ಗೌರವವನ್ನು ಸ್ವೀಕರಿಸುವ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾದುದು ಅತ್ಯಾವಶ್ಯಕ ಹಾಗೂ ಆತ್ಮವಿಶ್ವಾಸದಿಂದ ಹೆಜ್ಜೆ ಇಟ್ಟರೆ ಮಾತ್ರ ನಾವೆಲ್ಲರೂ ಸರ್ವೇಪಲ್ಲಿ ರಾಧಾಕೃಷ್ಣನ್‌ರವರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಮತ್ತು ಅವರು ತಮ್ಮ ಜನ್ಮ ದಿನವನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಲು ನಿರ್ಧರಿಸಿದ್ದು ಸಾರ್ಥಕವಾಗುತ್ತದೆ. ಮತ್ತೊಮ್ಮೆ ಎಲ್ಲಾ ಶಿಕ್ಷಕ ಬಂಧುಗಳಿಗೂ ಶಿಕ್ಷಕ ದಿನಾಚರಣೆಯ ಶುಭಾಶಯಗಳು.

ಸಂಪಾದಕ



ವಿದ್ಯೆಯ ಮುಖ್ಯ ಗುರಿ ಎಂದರೆ
ಸಮಾಜದಲ್ಲಿ ಇತರರರೊಡನೆ
ಕೂಡಿ ಬಾಳುವುದನ್ನು ಕಲಿಸುವುದು.

– ಡಾ॥ ಎಸ್. ರಾಧಾಕೃಷ್ಣನ್.

## ಪರಿವಿಡಿ


- ಸರ್ ಎಂ. ವಿಶ್ವೇಶ್ವರಯ್ಯ – ದಾರ್ಶನಿಕ ದಕ್ಷ ಆಡಳಿತಗಾರ 3
- ಪ್ರಾಂತ ನೂತನ ಕಾರ್ಯಕಾರಿಣಿ 4
- ಸ್ವಾತಂತ್ರ್ಯ ಸಂಗ್ರಾಮದ ಅನರ್ಘ್ಯ ರತ್ನಗಳು 5
- ಆದರ್ಶ ಶಿಕ್ಷಕನಾಗುವಂತೆ ಭಗವಂತ ವಿನಾಯಕನ ಅಶರೀರವಾಣಿ 6
- 34 ನೇ ಪ್ರತಿಭಾ ಪುರಸ್ಕಾರ ಬೆಂಗಳೂರು ಉತ್ತರ ಜಿಲ್ಲೆ 8
- ಶಿಕ್ಷಕರು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಲಿ 9
- ಶಿಕ್ಷಕರ ಸಾಂದರ್ಭಿಕ ರಜೆ 15 ದಿನಗಳೇ ಇರಲಿ 10
- ಚಿತ್ರಸುದ್ದಿ 11
- 34 ನೇ ಪ್ರತಿಭಾ ಪುರಸ್ಕಾರ ಬೆಂಗಳೂರು ದಕ್ಷಿಣ ಜಿಲ್ಲೆ 12



# ಸರ್. ಎಂ. ವಿಶ್ವೇಶ್ವರಯ್ಯ ದಾರ್ಶನಿಕ ದಕ್ಷ ಆಡಳಿತಗಾರ

**ಡಾ॥ ಟಿ. ಎನ್. ಲೋಕೇಶ್**
**ಚಿಂತಕರು ಹಾಗೂ ಶಿಕ್ಷಣತಜ್ಞ**



ಸರ್. ಎಂ. ವಿಶ್ವೇಶ್ವರಯ್ಯ (1860–1962) ರವರು ಆಧುನಿಕ ಕರ್ನಾಟಕದ ಶಿಲ್ಪಿ. ಸದೃಢ ತಾಂತ್ರಿಕ ಭಾರತದ ನಿರ್ಮಾತೃ ಎಂದರೆ ಅತಿಶಯೋಕ್ತಿಯಲ್ಲ. ಸಂಸ್ಕೃತ ವಿದ್ವಾಂಸರಾದ ಶ್ರೀನಿವಾಸ ಶಾಸ್ತ್ರಿ ಮತ್ತು ವೆಂಕಟ ಲಕ್ಷ್ಮಮ್ಮನವರ ಎರಡನೇ ಮಗನಾಗಿ ಸೆಪ್ಟೆಂಬರ್ 15, 1860ರಲ್ಲಿ ಚಿಕ್ಕಬಳ್ಳಾಪುರ ಸಮೀಪದ ಮುದ್ದೇನಹಳ್ಳಿಯಲ್ಲಿ ವಿಶ್ವೇಶ್ವರಯ್ಯನವರ ಜನನ. ಕಡುಬಡತನದ ಬವಣೆಯಲ್ಲಿ ಬೆಂದು ಪರಿಪಕ್ವತೆಯ ಅಪರಂಜಿಯಾದ ವಿಶ್ವೇಶ್ವರಯ್ಯನವರು ಬಾಲ್ಯದಿಂದಲೂ ಪ್ರತಿಭಾನ್ವಿತರೆನಿಸಿದ್ದರು. ಮನೆಯಲ್ಲಿದ್ದ ಕಂಚಿನ ಪಾತ್ರೆಗಳನ್ನು ಮಾರಿ ಬಂದಂತಹ ಹಣದಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಶುಲ್ಕ ಭರಿಸಿ, ಪರೀಕ್ಷೆಯಲ್ಲಿ ಇಡೀ ಮೈಸೂರು ಸಂಸ್ಥಾನಕ್ಕೇ ಪ್ರಥಮ ರ್‍ಯಾಂಕ್‌ನಲ್ಲಿ ಉತ್ತೀರ್ಣರಾಗಿ ವಿದ್ಯೆ, ಜ್ಞಾನಕ್ಕೆ ಬಡತನದ ಹಂಗಿಲ್ಲ ಎಂದು ಜಗಜ್ಜಾಹಿರುಗೊಳಿಸಿದ ಮಹಾನ್‌ಚೇತನ. ವಿಶ್ವೇಶ್ವರಯ್ಯನವರಿಗೆ ವಿಶ್ವೇಶ್ವರಯ್ಯ ಮಾತ್ರ ಸಾಟಿ ಎಂಬಂತೆ ತಮ್ಮ ಬದುಕನ್ನು ರಾಷ್ಟ್ರದ ಉನ್ನತಿಗೆ ಮೀಸಲಿಟ್ಟ ತಾಂತ್ರಿಕ ಸಂತ.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎ ಪದವಿ, ಪೂನಾದ ಕಾಲೇಜ್ ಆಫ್ ಎಂಜಿನಿಯರಿಂಗ್‌ನಿಂದ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದು 1884 ರಲ್ಲಿ ಬಾಂಬೆ ಪ್ರೆಸಿಡೆನ್ಸಿಯ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಅಭಿಯಂತಕರಾಗಿ ನಿಯೋಜನೆಗೊಂಡ ಧೀಮಂತ ವ್ಯಕ್ತಿತ್ವ ವಿಶ್ವೇಶ್ವರಯ್ಯನವರದ್ದು.

ವಿಶ್ವೇಶ್ವರಯ್ಯನವರ ಬದುಕು ಆದರ್ಶಪ್ರಾಯ ಮತ್ತು ಆದರಣೀಯ. ದಕ್ಷ ಆಡಳಿತಗಾರನ ಪರ್ಯಾಯವೇ ವಿಶ್ವೇಶ್ವರಯ್ಯನವರ ಜೀವನ. ಖಾನ್‌ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿನ ಪ್ರತಿಕೂಲ ಪರಿಸ್ಥಿಯ ನಡುವೆಯೂ ಪಂಜ್ರಾ ನದಿಗೆ ತೂಬು ಮೇಲ್ಗಾಲುವೆಯನ್ನು ನಿರ್ಮಿಸಿದ ಕೀರ್ತಿ ವಿಶ್ವೇಶ್ವರಯ್ಯನವರಿಗೆ ಸಲ್ಲುತ್ತದೆ. ಸಿಂದ್ ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಪೂರೈಸಿದ ಕೀರ್ತಿ ಅವರೊಬ್ಬ ಸಂವೇದನಾಶೀಲ ಆಡಳಿತಗಾರರು ಎಂಬುದನ್ನು ಸಾಬೀತುಪಡಿಸುತ್ತದೆ. ಪೂನಾದಲ್ಲಿ ಸರದಿಯಲ್ಲಿ ಬೆಳೆಗಳನ್ನು ಬೆಳೆಯುವ ತಾಕು ನೀರಾವರಿ ಪದ್ಧತಿ ಜಾರಿಗೊಳಿಸಿ ರೈತರ ಸಂಕಷ್ಟಕ್ಕೆ ಸ್ಪಂದಿಸಿದ ರೀತಿ ನಿಜಕ್ಕೂ ಶ್ಲಾಘನೀಯ. ಪರಮೋಚ್ಚ ಆಡಳಿತಗಾರರಾದ ವಿಶ್ವೇಶ್ವರಯ್ಯನವರ ವ್ಯಕ್ತಿತ್ವದ ಎರಡು ಗುಣವಿಶೇಷಗಳೆಂದರೆ 'ಕಾರ್ಯಕ್ಷಮತೆ' ಮತ್ತು 'ಅವಿಚ್ಛಿನ್ನ ಪರಿಶ್ರಮ'. ಇದರಿಂದಲೇ ಬ್ರಿಟಿಷ್ ಅಧಿಕಾರಿಗಳ ಮೆಚ್ಚುಗೆಗೆ ಸಹ ಪಾತ್ರರಾಗಿದ್ದರು. ಆದಕಾರಣದಿಂದಲೇ ಮುಂಬೈ ಪ್ರಾಂತ್ಯದ 'ಸ್ಯಾನಿಟರಿ ಎಂಜಿನಿಯರ್' ಆಗಿ ನೇಮಕಗೊಂಡ ಮೊದಲ ಭಾರತೀಯ ಎಂಬ ಹೆಗ್ಗಳಿಕೆ ವಿಶ್ವೇಶ್ವರಯ್ಯನವರಿಗೆ ಸಲ್ಲುತ್ತದೆ. ಹೈದ್ರಾಬಾದ್‌ನ ಈಸಿ ಹಾಗೂ ಮೂಸಿ ನದಿಗಳಿಗೆ ಜಲಾಶಯಗಳನ್ನು ನಿರ್ಮಿಸುವ ಮೂಲಕ ಪ್ರತಿಬಾರಿ ಪ್ರವಾಹಕ್ಕೆ ಸಿಲುಕಿ ನಲುಗುತ್ತಿದ್ದ ಹೈದ್ರಾಬಾದ್‌ನ ಶಾಶ್ವತ ಪರಿಹಾರ ತಂದುಕೊಟ್ಟ ಧೀಮಂತ ದಾರ್ಶನಿಕ ವಿಶ್ವೇಶ್ವರಯ್ಯ. ಈ ರೀತಿ ಹೈದ್ರಾಬಾದ್‌ಗೆ ವ್ಯವಸ್ಥಿತ ನಗರ ನಿರ್ಮಾಣ ಯೋಜನೆಯನ್ನು ಸಾಕಾರಗೊಳಿಸಿದ ದಿವ್ಯ ವ್ಯಕ್ತಿತ್ವ ವಿಶ್ವೇಶ್ವರಯ್ಯನವರದ್ದು. ಪೂನಾದ ಪೀಪ್, ಗ್ವಾಲಿಯರ್‌ನ ತಿಗ್ರಾ ಹಾಗೂ ಕೆಆರ್‌ಎಸ್ ಜಲಾಶಯಗಳಿಗೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸುವ ಮೂಲಕ ಜಲಾಶಯಗಳಿಗೆ ಅನಿರೀಕ್ಷಿತವಾಗಿ ಬರಬಹುದಾದ ಅಪಾಯಗಳಿಂದ ಪಾರುಮಾಡಿದರು. ವಿಶ್ವೇಶ್ವರಯ್ಯನವರ ಸೂಕ್ಷ್ಮಮತಿತ್ವ, ಮೇಧಾವಿತನ, ಬುದ್ಧಿವಂತಿಕೆ, ನಿಷ್ಪಕ್ಷಪಾತಿ, ಕುಶಲಮತಿ, ಕ್ರಿಯಾಶೀಲತ್ವ ಮತ್ತು ಶಿಸ್ತನ್ನು ಗಮನಿಸಿದ ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿಕೃಷ್ಣರಾಜ ಒಡೆಯರ್‌ರವರು ವಿಶ್ವೇಶ್ವರಯ್ಯನವರನ್ನು ಮೈಸೂರು ಸಂಸ್ಥಾನದ ದಿವಾನ (1912–1918) ಹುದ್ದೆ ನೀಡಿದ್ದು ಇತಿಹಾಸ ಪುಟಗಳಲ್ಲಿನ ಅದ್ಭುತ ಅಧ್ಯಯನವಾಗಿ ಉಳಿದಿದೆ. ಮಹೋನ್ನತ ಹುದ್ದೆ ಅರಸಿ ಬಂದರೂ ವಿಶ್ವೇಶ್ವರಯ್ಯನವರ 'ನಿರ್ಲಿಪ್ತತೆ' ಹಾಗೂ ಅವರು ತಮ್ಮ ತಂದೆ–ತಾಯಿಗೆ ಹಾಕಿದ ಷರತ್ತು ನಮ್ಮನ್ನೇ ಮಂತ್ರಮುಗ್ಧರನ್ನಾಗಿಸುತ್ತದೆ. "ನಮ್ಮ ಹತ್ತಿರದ ಸಂಬಂಧಿಗಳೆಂದು ಯಾರನ್ನು ಸಹ ಕೆಲಸಕ್ಕೆ ಸೇರಿಸು ಎಂದು ನೀವು ಶಿಫಾರಸ್ಸು ಮಾಡುವುದಿಲ್ಲ ಎಂದು ನನಗೆ ಮಾತುಕೊಟ್ಟರೇ ಮಾತ್ರ ನಾನು ದಿವಾನ ಹುದ್ದೆಯನ್ನು ಒಪ್ಪಿಕೊಳ್ಳುತ್ತೇನೆ ಇದಕ್ಕೆ ನಿಮ್ಮ ಸಮ್ಮತಿ ಇದೆಯೇ?" ಎಂದು ಹೇಳಿದ ಮಾತು ಇಂದಿನ ಸ್ವಜನಪಕ್ಷಪಾತ ರಾಜಕೀಯ ಆಡಳಿತಕ್ಕೆ ಇದಕ್ಕಿಂತ ಉತ್ತಮ ಜೀವಂತ ನಿದರ್ಶನ ಮತ್ತೆಲ್ಲೂ ದೊರಕಲಾರದು.

**ಪುಟ 7 ಕ್ಕೆ** ➢

# ಪ್ರಾಂತ ನೂತನ ಕಾರ್ಯಕಾರಿಣಿ

## 2019–2022 ರ ಅವಧಿಯ ಪ್ರಾಂತೀಯ ಕಾರ್ಯಕಾರಿಣಿಗೆ ಆಯ್ಕೆಯಾದ ಪದಾಧಿಕಾರಿಗಳು.

| | |
|---|---|
| ಸಂರಕ್ಷಕರು: | **ಶ್ರೀ ಕೃ ನರಹರಿ,** ಎಕ್ಸ್ ಎಂ.ಎಲ್.ಸಿ. |
| ಎ.ಬಿ.ಆರ್.ಎಸ್.ಎಂ. : | **ಶ್ರೀ ಶಿವಾನಂದ ಸಿಂಧನಕೇರಾ,** ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ<br>**ಶ್ರೀ ಕೆ ಬಾಲಕೃಷ್ಣ ಭಟ್,** ಎಕ್ಸ್ ಎಂ.ಎಲ್.ಸಿ., ಕ್ಷೇತ್ರಿಯ ಪ್ರಮುಖ<br>**ಶ್ರೀ ಹೆಚ್. ನಾಗಭೂಷಣ ರಾವ್,** ವಿಶೇಷ ಆಹ್ವಾನಿತರು<br>**ಶ್ರೀಮತಿ ಮಮತಾ ಡಿ. ಕೆ.,** ಮಹಿಳಾ ವಿಭಾಗದ ರಾಷ್ಟ್ರೀಯ ಸಹ ಕಾರ್ಯದರ್ಶಿ |
| ರಾಜ್ಯ ಅಧ್ಯಕ್ಷರು: | **ಸಂದೀಪ ಬೂದಿಹಾಳ** |
| ರಾಜ್ಯ ಕಾರ್ಯಾಧ್ಯಕ್ಷರು: | **ಅರುಣ್ ಶಹಾಪೂರ್** |
| ರಾಜ್ಯ ಪ್ರಧಾನ ಕಾರ್ಯದರ್ಶಿ : | **ಚಿದಾನಂದ ಆ. ಪಾಟೀಲ್** |
| ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ: | **ಗಂಗಾಧರಾಚಾರಿ ಎ.** |
| ರಾಜ್ಯ ಉಪಾಧ್ಯಕ್ಷರು: | **ಆರ್. ಕೊಟ್ರಪ್ಪ ; ಬಿ. ಹೆಚ್. ವರದರಾಜು,<br>ಶ್ರೀಮತಿ ರೋಹಿಣಿ ದೇಶಪಾಂಡೆ ; ಎಸ್. ನಂದೀಶ್** |
| ರಾಜ್ಯ ಕಾರ್ಯದರ್ಶಿಗಳು: | **ಗುಂಡಾಚಾರ್ ; ಬಿ. ಎಂ. ಎಸ್. ವೃಷಭೇಂದ್ರಸ್ವಾಮಿ<br>ಬಿ. ವಿಜಯಲಕ್ಷ್ಮಿ ; ಆರ್. ಪಿ. ಓಂಟಗೂಡೆ** |
| ರಾಜ್ಯ ಖಜಾಂಚಿ: | **ಜೆ. ಎಂ. ಜೋಶಿ** |
| ರಾಜ್ಯ ಕಾರ್ಯಾಲಯ ಪ್ರಮುಖ: | **ಜಿ. ಎಸ್. ಕೃಷ್ಣಮೂರ್ತಿ** |
| ರಾಜ್ಯ ಮಹಿಳಾ ಪ್ರಮುಖ: | **ಜಿ. ಎನ್. ವಾಸುಕಿ** |
| ರಾಜ್ಯ ವಿಶೇಷ ಆಹ್ವಾನಿತರು: | **ಶ್ರೀಮತಿ ಸೀತಾಲಕ್ಷ್ಮಿ ; ಕ್ಯಾಪ್ಟನ್ ಗಣೇಶ ಕಾರ್ಣಿಕ್** |
| ರಾಜ್ಯಕಾರ್ಯಕಾರಣಿ ಸದಸ್ಯರು: | **ಹೆಚ್.ಎ. ಸರ್ವೇಶ್ ; ರಾಜಶೇಖರ ಮಂಗಲಗಿ ; ಪರಮೇಶ್ವರಪ್ಪ ಓಲೇಕಾರ<br>ಶ್ರೀಮತಿ ಜಕ್ಕಲಿ ; ಶ್ರೀಮತಿ ತ್ರಿವೇಣಿ ; ಪ್ರಕಾಶರಾಣೆ<br>ಹೆಚ್. ಪಿ. ಮಹಾಲಿಂಗಯ್ಯ ; ಮನೋರಮ** |
| ಪ್ರಕೋಷ್ಠಗಳು: | |
| **ಪ್ರಕಾಶನ :** | ಜಿ. ಕೆ. ತಳವಾರ |
| **ಮಾಧ್ಯಮ:** | ಶ್ರೀಮತಿ ರೇಣುಕಾ ಹಂಗನಳ್ಳಿ ; ಅಶೋಕ ಮಾಡಗಿ ; ಬೀರೇಶ್ |
| **ಪ್ರಶಿಕ್ಷಣ :** | ಅರವಿಂದ ದೇಸಾಯಿ ; ಸಿದ್ದಲಿಂಗಸ್ವಾಮಿ ; ಬಸವರಾಜು<br>ಮುಕುಂದ ಗೋಕಲೆ ; ಕುಮಾರಿ ಜಿ. ರೇಖಾ |
| ರಾಜ್ಯ ವಿಷಯ ವೇದಿಕೆಗಳು: | **ದಯಾನಂದ ಸಿಕ್ಕೇರಿ ; ಸಿ. ಪುಟ್ಟಸ್ವಾಮಿ.** |
| ವಿಭಾಗ ಪ್ರಮುಖರು : | |
| **ಕಲಬುರಗಿ :** | ಮಹೇಶ ಬಸರಕೋಡ್ |
| **ಬೆಳಗಾವಿ :** | ಸಂತೋಷ ಹುನಳ್ಳಿ |
| **ಧಾರವಾಡ :** | ಶ್ರೀಧರ ಪಾಟೀಲ್‌ಕುಲಕರ್ಣಿ |
| **ಬೆಂಗಳೂರು :** | ಮಲ್ಲಿಕಾರ್ಜುನ್ ; ಸಹ ಪ್ರಮುಖ : ಮಂಜುನಾಥ |
| **ಮೈಸೂರು :** | ಎಸ್. ನಂದೀಶ್ |

(ಕಾರ್ಯಕಾರಿಣಿ ವರದಿ ಮುಂದಿನ ಸಂಚಿಕೆಯಲ್ಲಿ)

ಭೂರಮೆ

# ಸ್ವಾತಂತ್ರ್ಯ ಸಂಗ್ರಾಮದ ಅನರ್ಘ್ಯ ರತ್ನಗಳು

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶದ ಸಾವಿರಾರು, ಲಕ್ಷಾಂತರ, ಕೋಟ್ಯಾಂತರ ಜನರು ತನು–ಮನ–ಧನಗಳನ್ನು ಅರ್ಪಿಸಿದ ಸಂಗತಿಗಳು ಸರ್ವವಿದಿತ. ಇಂತಹ ದೇಶಭಕ್ತರಲ್ಲಿ ಮಹಿಳೆಯರ ಸಂಖ್ಯೆಯೇನೂ ಕಡಿಮೆಯಿರಲಿಲ್ಲ. ಆ ಸಮಯದಲ್ಲಿ ಕೆಲವು ಮಹಿಳಾ ಸಂಘಟನೆಗಳು ಪಕ್ಷರಾಜಕೀಯದಿಂದಲೇ ಹೊರಗುಳಿದು ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ದುಡಿಯಲು ನಿರ್ಧರಿಸಿದ್ದರೆ, ಮತ್ತೆ ಕೆಲವರು ಮಹಿಳೆಯರ ಸ್ಥಾನಮಾನಗಳಲ್ಲಿ ಪ್ರಗತಿಯಾಗಬೇಕಾದಲ್ಲಿ ರಾಜಕೀಯವಾಗಿ ತೊಡಗಿಸಿ ಕೊಳ್ಳುವುದರಿಂದಲೇ ಸಾಧ್ಯವೆಂಬ ಅಭಿಪ್ರಾಯದೊಂದಿಗೆ ರಾಷ್ಟ್ರೀಯ ಹೋರಾಟದಲ್ಲಿ ಸಕ್ರಿಯವಾಗಿಯೇ ಪಾಲ್ಗೊಂಡಿದ್ದರು. ಸ್ವದೇಶೀ ಚಳುವಳಿ, ವಿದೇಶೀ ವಸ್ತುಗಳ ಬಹಿಷ್ಕಾರ, ಪ್ರಭಾತಸೇರಿ, ಭೂಗತ ಚಟುವಟಿಕೆಗಳಲ್ಲಿ ತೊಡಗಿದ್ದ ಹೋರಾಟಗಾರರಿಗೆ ಆಹಾರ, ವಸತಿ ಒದಗಿಸುವುದು, ರಾಜಕೀಯ ಖೈದಿಗಳಿಗೆ ಅಗತ್ಯ ಸಂದೇಶಗಳನ್ನು ರವಾನಿಸುವುದು ಮುಂತಾದ ಕಾರ್ಯಗಳಲ್ಲಿ ನಿರತರಾಗಿದ್ದರು.

ಗಾಂಧೀಜಿಯವರ ಪ್ರೇರಣೆಗಿಂತಲೂ ಮೊದಲೇ ಅಂದರೆ, 1905ರಲ್ಲಿಯೇ ಬಂಗಾಳದಲ್ಲಿ ಸ್ವದೇಶೀ ಆಂದೋಲನ ಮತ್ತು ಇನ್ನಿತರ ಬ್ರಿಟಿಷ್ ವಿರೋಧೀ ಆಂದೋಲನಗಳಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿಯೇ ಇತ್ತು. 1930 ರಲ್ಲಂತೂ ಗಾಂಧೀಜೀ ಯವರೊಂದಿಗೆ 'ದಂಡಿ' ಸತ್ಯಾಗ್ರಹದಲ್ಲಿ ಸಾವಿರಾರು ಮಹಿಳೆಯರು ಪಾಲ್ಗೊಂಡು ಸೆರೆಮನೆ ಸೇರಿದ್ದರು.

ಬಂಗಾಳ, ಪಂಜಾಬ್, ಮಹಾರಾಷ್ಟ್ರದಲ್ಲಿ ವಿದೇಶ ಗಳಲ್ಲಿರುವಂತೆ ಉಗ್ರಗಾಮೀ ಮಹಿಳಾ ತಂಡಗಳಿದ್ದುವು. ಅವರೆಲ್ಲ ಕ್ರಾಂತಿಕಾರಿಗಳೊಂದಿಗೆ ಸೇರಿ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಭಿಕಾಜಿಕಾಮ, ಪರ್ಮಾ ಡಿ.ಎಸ್. ಕ್ಯಾಪ್ಟನ್, ಸರಳಾದೇವಿ ಚೌಧುರಾಣಿ, ಸುಶೀಲಾ ದೇವಿ, ದುರ್ಗಾದೇವಿ, ರೂಪವತಿ ಜೈನ್, ಕಲ್ಪನಾದತ್, ಕಮಲದಾಸಗುಪ್ತ, ಲಕ್ಷ್ಮೀ ಸೆಹಗಲ್ ಮುಂತಾದವರ ತಂಡವು ನೇತಾಜಿ ಸುಭಾಷ್‌ಚಂದ್ರಬೋಸ್ ಸ್ಥಾಪಿಸಿದ್ದ ಐ.ಎನ್.ಎ ನ ಭಾಗವಾಗಿತ್ತು.

ಈ ದೇಶಭಕ್ತರು ನಮಗೆ ಸದಾ ಸ್ಮರಣೀಯರೇ. ಸರ್ವಸಮರ್ಪಣಾ ಭಾವದಿಂದ ದೇಶಭಕ್ತಿಯನ್ನು ಮೆರೆದು ಹುತಾತ್ಮರಾದ ಹೆಣ್ಣುಮಕ್ಕಳು ಹಳ್ಳಿ ಹಳ್ಳಿಗಳಲ್ಲಿಯೂ ಇದ್ದವರೇ. ಪ್ರಸಿದ್ಧರಾದ ಕೆಲವರ ಹೆಸರುಗಳಷ್ಟೇ ನಮಗೆ ಪರಿಚಿತವಾಗಿದ್ದು, ಅದಷ್ಟೋ ಮಹಾನ್ ಚೇತನಗಳು ದೇಶಕ್ಕೆ ತಮ್ಮನ್ನು ಅರ್ಪಿಸಿ ಕೊಂಡ ವಿವರಗಳು ಅಪರಿಚಿತವಾಗಿಯೇ ಉಳಿದುಕೊಂಡಿವೆ. ಇತಿಹಾಸದ ಪುಟಗಳಲ್ಲಿ ಅವರೆಲ್ಲ ದಾಖಲಾಗದಿರಬಹುದು. ಆದರೆ, ಅವರ ಆದರ್ಶ, ಧೈರ್ಯ, ದೇಶಪ್ರೇಮ ಸದಾಕಾಲಕ್ಕೂ ಎಲ್ಲರಿಗೂ ಅನುಕರಣೀಯ. ಅವರಲ್ಲಿ ಕೆಲವರನ್ನಾದರೂ ಸ್ಮರಿಸುತ್ತ ಗೌರವ ಸಲ್ಲಿಸುವ ಪ್ರಯತ್ನವಿಲ್ಲಿದೆ. ಇದು ನಮ್ಮ ಅತ್ಯವಶ್ಯಕವಾದ ಕರ್ತವ್ಯವೂ ಹೌದು.

**ಪ್ರಭಾತೀಗಿರಿ:** ಈಕೆ ಪಶ್ಚಿಮ ಒರಿಸ್ಸಾ ಪ್ರಾಂತ್ಯದ ಹೆಣ್ಣುಮಗಳು. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಸಿಡಿದೆದ್ದು ಎರಡು ವರ್ಷಗಳ ಕಾಲ ಸೆರೆವಾಸ ಅನುಭವಿಸಿದಾಗ ಈಕೆಯ ವಯಸ್ಸು ಕೇವಲ 16. ತಾಯ್ನೆಲದ ಪ್ರೇಮ ಮೊಳಕೆಯೊಡೆದದ್ದು 10 ರ ಪ್ರಾಯದಲ್ಲಿ. ಶಾಲೆಯಿಂದ ಹೊರಬಂದ ಬಾಲಕಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪರವಾಗಿ ಪ್ರಚಾರ ಮಾಡತೊಡಗಿದ್ದಳು. ಒರಿಸ್ಸಾದ ಹಳ್ಳಿ ಹಳ್ಳಿಗಳಲ್ಲಿ ಸುತ್ತಾಡುತ್ತ ಕಾಂಗ್ರೆಸ್ ಮತ್ತು ಗಾಂಧೀಜಿಯಯುವರ ಸಂದೇಶಗಳನ್ನು ಹರಡತೊಡಗಿದ್ದಳು. ನಂತರದಲ್ಲಿ ತನ್ನ ಜೀವನವನ್ನೇ ಅನಾಥರ ಸೇವೆಗೆಂದು ಮೀಸಲಿಡಲು ನಿರ್ಧರಿಸಿ ಒಂದು ಅನಾಥಾಶ್ರಮವನ್ನೇ ಪ್ರಾರಂಭಿಸಿ 'ಪಶ್ಚಿಮ ಒರಿಸ್ಸಾದ ಮದರ್ ತೆರೇಸಾ' ಎಂದೇ ಜನಾನುರಾಗಿ ಯಾದಳು.

**ಮಾತಂಗಿಣಿ ಹಾಜ್ರಾ:** ಕೈಯಲ್ಲಿ ತ್ರಿವರ್ಣಧ್ವಜ, ಮುಖದಲ್ಲಿ ಆತ್ಮವಿಶ್ವಾಸದ ಭಾವ. ದೃಢವಾದ ಹೆಜ್ಜೆಗಳನ್ನು ಹಾಕುತ್ತ ಮುಂದೆ ಮುಂದೆ ಸಾಗುತ್ತಿದ್ದಂತೆ ಗುಂಡು ಹಾರಿಸುವ ಆದೇಶ ಕಿವಿಗಳಲ್ಲಿ ಮೊಳಗಿತ್ತು. ಆದರೇನು? ಆ ಧೀರ ವನಿತೆಯ ಮುಂದಿಟ್ಟ ಹೆಜ್ಜೆ ನಿಂತಿರಲಿಲ್ಲ. ಒಂದಲ್ಲ, ಎರಡಲ್ಲ, ಮೂರು ಮೂರು ಗುಂಡುಗಳು ಆಕೆಯ ಮೇಲೆರಗಿದ್ದುವು. ಹಣೆಯಿಂದ, ಎರಡೂ ಕೈಗಳಿಂದ ರಕ್ತ ಸುರಿಯುತ್ತಿದ್ದರೂ ತಮಲೂಕ್ ಪೊಲೀಸ್ ಸ್ಟೇಷನ್ ತಲುಪುವ ಗುರಿಯಿಂದ ಆಕೆ ಹಿಂದೆ ಸರಿಯಲಿಲ್ಲ. 'ವಂದೇ ಮಾತರಂ' ಘೋಷಣೆ ಮಾಡುತ್ತ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಲ್ಗೊಂಡಿದ್ದ 71 ರ ವಯಸ್ಸಿನ ಆ ಹಿರಿಯ ಮಹಿಳೆ ತನ್ನ ಕಡೆ ಉಸಿರಿರುವವರೆಗೂ ಕೈಯಲ್ಲಿ ಹಿಡಿದಿದ್ದ ತ್ರಿವರ್ಣಧ್ವಜವನ್ನು ಕೆಳಕ್ಕೆ ಬೀಳಗೊಡಲಿಲ್ಲ. ಒಬ್ಬ ಬಡ ರೈತನ ಮಗಳಾಗಿದ್ದ ಮಾತಂಗಿಣಿ ಹಾಜ್ರಾ 1905ರಲ್ಲಿಯೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ್ದಳು. ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಅಪರಾಧಕ್ಕಾಗಿ ಬಂಧಿತಳಾಗಿ ತನ್ನ ದೇಶಪ್ರೇಮವನ್ನು ಮೆರೆದಿದ್ದಳು.

**ತಾರಾರಾಣಿ ಶ್ರೀವಾಸ್ತವ:** ಬಿಹಾರದ ಒಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಈಕೆ ವಿವಾಹವಾಗಿದ್ದು ಫೂಲೇಂದು ಬಾಬು ಎಂಬ ಸ್ವಾತಂತ್ರ್ಯ ಹೋರಾಟಗಾರನೊಂದಿಗೆ. ತನ್ನ ಹಳ್ಳಿಯ ಸುತ್ತಲಿನ ಊರುಗಳಲ್ಲಿ ಮಹಿಳಾ ಸಂಘಟನೆ ಮಾಡುತ್ತ ಪತಿಯೊಡನೆ ಬ್ರಿಟಿಷ್ ಆಡಳಿತಶಾಹಿ ವಿರುದ್ಧದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಳು. ಸಿವಾನ್ ಪೊಲೀಸ್ ಸ್ಟೇಷನ್‌ನ ಭಾವಣಿಯ ಮೇಲೆ ತ್ರಿವರ್ಣಧ್ವಜ ಹಾರಿಸಲು ಫುಲೇಂದು ಬಾಬಾ ತನ್ನವರೊಂದಿಗೆ ಹೊರಟಿದ್ದ. ಶಾಂತಿಯುತವಾಗಿಯೇ ನಡೆದಿದ್ದರೂ ಪೊಲೀಸರು ಧ್ವಜ ಹಾರಿಸುವುದನ್ನು ತಪ್ಪಿಸಲು ಲಾಠಿಚಾರ್ಜ್ ಪ್ರಾರಂಭಿಸಿದ್ದರು. ಆದರೂ ದೇಶಭಕ್ತರು ನಿಲ್ಲದಿದ್ದಾಗ ಗುಂಡು ಹಾರಿಸಲು ತೊಡಗಿದ್ದರು. ಗಾಯಗೊಂಡ ಫುಲೇಂದು ಕೆಳಗೆ ಬಿದ್ದಾಗ ತಾರಾರಾಣಿ ಮುನ್ನುಗ್ಗಿ

ಪುಟ 8 ಕ್ಕೆ ➢

# ಆದರ್ಶ ಶಿಕ್ಷಕನಾಗುವಂತೆ ಭಗವಂತ ವಿನಾಯಕನ ಅಶರೀರವಾಣಿ

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಕಾಲಚಕ್ರ ಸುತ್ತಿದಂತೆ ಚಕ್ರದ ಅದದೇ ಬಿಂದು ಮೇಲೆ ಕೆಳಗೆ ಕಾಣಿಸಿಕೊಳ್ಳುತ್ತದೆ. ಅಂತೆಯೇ ಕ್ಯಾಲೆಂಡರ್ ಹಾಳೆ ತಿರುವಿದಂತೆ ಅದೇ ವಾರ, ಅದೇ ತಿಂಗಳು ವರ್ಷ ಮಾತ್ರ ಬೇರೆ. ಈ ವರ್ಷದ ಸುತ್ತಿನಲ್ಲಿ ಸೆಪ್ಟಂಬರ್ 5 ಮತ್ತೆ ಬಂದಿದೆ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನ. ಜತೆಗೆ ಶಿಕ್ಷಕರ ದಿನಾಚರಣೆ ಮತ್ತದೇ ಸಮಾರಂಭಗಳು. ರಾಧಾಕೃಷ್ಣರವರ ಗುಣಗಾನ. ಅರ್ಜಿ ಹಾಕಿಕೊಂಡ ಶಿಕ್ಷಕರಿಗೆ ನಗರ, ಜಿಲ್ಲೆ, ರಾಜ್ಯ, ರಾಷ್ಟ್ರಮಟ್ಟದ ಪುರಸ್ಕಾರ. ಯಾವುದರಲ್ಲೂ ಇನಿತೂ ವ್ಯತ್ಯಾಸವಿಲ್ಲ. ಇಂಗ್ಲಿಷ್‌ನಲ್ಲಿ 'ರೋಟೀನ್' ಅಂತಾರಲ್ಲ ಹಾಗೆ.

ನಾವು ಶಿಕ್ಷಕರಾದರೂ ಅಷ್ಟೇ, ಅಂದು ನಮ್ಮ ಕೊರಳಿಗೆ ಹಾರ ಬೀಳಲೆಂಬ ಬಯಕೆ, ಕಾತುರ, ಅದಕ್ಕಾಗಿ ನಮ್ಮ ಮೌಲ್ಯಮಾಪನಕ್ಕೆ ಒಂದು ಕರಪತ್ರದಿಂದ ನಮಗೆ ಅಲ್ಲಲ್ಲಿ ಆಗಾಗ್ಯೆ ಸಿಕ್ಕ ಎಲ್ಲ ಸರ್ಟಿಫಿಕೇಟ್‌ಗಳನ್ನು ಜೋಪಾನವಾಗಿಟ್ಟು ಅರ್ಜಿಯ ಜತೆ ಗುಜರಾಯಿಸುವುದು. ಪ್ರಭಾವಿಗಳ ಬೆನ್ನಟ್ಟಿ ವಶೀಲಿಬಾಜಿ ಮಾಡಿ ಪುರಸ್ಕಾರ ಗಿಟ್ಟಿಸಿಕೊಳ್ಳುವುದು. ಧನ್ಯತೆ ಅನುಭವಿಸುವುದು.

ಇಷ್ಟೇನಾ ಶಿಕ್ಷಕ ದಿನಾಚರಣೆಯ ಪ್ರಾಮುಖ್ಯತೆ. ಈ ಸಮಯದಲ್ಲಿ ನಾನು ಓದಿದ ಒಂದು ಲೇಖನ ನೆನಪಾಗುತ್ತಿದೆ.

ಈಶ್ವರಚಂದ್ರ ಆಂಧ್ರದ ಒಂದು ಶಾಲೆಯ ಅಧ್ಯಾಪಕ. ಉತ್ತಮ ಬೋಧಕನೆಂದು ಅವನಿಗೆ ಕೇಂದ್ರ ಸರ್ಕಾರದಿಂದ ಪ್ರಶಸ್ತಿ ಸಿಕ್ಕಿತು. ರಾಷ್ಟ್ರಪತಿಗಳಿಂದ ಆ ವರ್ಷದ ಪ್ರಶಸ್ತಿ ಪಡೆದ ಈಶ್ವರಚಂದ್ರ ತನ್ನ ಸಹಕಾರಿಗಳೊಂದಿಗೆ ದೆಹಲಿಯಿಂದ ವಿಜಯವಾಡಕ್ಕೆ ಹೊರಡುವ ರೈಲು ಹತ್ತಿದ. ರೈಲಿನಲ್ಲಿ ಸಹಕಾರಿಗಳೊಂದಿಗೆ ಅವರವರ ಸಾಧನೆಯ ಬಗ್ಗೆ, ತಮಗೆ ಪ್ರಶಸ್ತಿ ಸಿಕ್ಕ ಮಾನದಂಡಗಳ ಬಗ್ಗೆ ಚರ್ಚೆಮಾಡಿಕೊಂಡು ಒಂದು ದಿನದ ತರುವಾಯ ವಿಜಯವಾಡ ತಲುಪಿದ. ಅಲ್ಲಿಂದ ಬಸ್ ಹತ್ತಿ ತನ್ನೂರಿನ ಹಾದಿ ಹಿಡಿದ. ಊರಿಗೆ 1 ಮೈಲುದೂರದಲ್ಲೇ ಬಸ್‌ನಿಂದ ಇಳಿದು ತನ್ನ ಮನೆಯತ್ತ ನಡೆಯತೊಡಗಿದ. ಬೆನ್ನಿಗೆ ಭಾರವಾದ ಚೀಲ. ಕೈನಲ್ಲಿ ಪ್ರಶಸ್ತಿ ಫಲಕ. ತಲೆಯಲ್ಲಿ, ಮನೆಯಲ್ಲಿ, ಗ್ರಾಮದಲ್ಲಿ ತನಗೆ ಸಿಗಬಹುದಾದ ಪ್ರಶಂಸೆಯ ಬಗ್ಗೆ ಕನಸು. ಊರ ಹತ್ತಿರದಲ್ಲೇ ಒಂದು ವಿನಾಯಕನ ಗುಡಿ. ಈಶ್ವರಚಂದ್ರ ಗುಡಿಯನ್ನು ಹೊಕ್ಕು ವಿನಾಯಕನ ಮುಂದೆ ತನ್ನ ಪ್ರಶಸ್ತಿ ಪತ್ರ– ಫಲಕವನ್ನು ಇಟ್ಟು ಅಡ್ಡ ಬಿದ್ದ.

ಗಣಪತಿಯ ವಾಣಿ ಮೊಳಗಿತು. "ಮಗೂ ಇದೇನು ಸಾಮಗ್ರಿ ನನ್ನ ಮುಂದಿಟ್ಟಿರುವೆ, ಕಡುಬು, ಹಣ್ಣುಗಳು ಕಾಣಿಸುತ್ತಿಲ್ಲವಲ್ಲ".

ಈಶ್ವರಚಂದ್ರ ಆಶ್ಚರ್ಯಚಕಿತನಾದ. ವಿನಾಯಕನೊಂದಿಗೆ ಸಂವಾದ ಆರಂಭಿಸಿ 'ಪ್ರಭು ಇದೆಲ್ಲಾ ನನ್ನ ಸಾಧನೆಗೆ ಸಂದ ಗೌರವ. ರಾಷ್ಟ್ರಪತಿಗಳೇ ಶಾಲು ಹೊದಿಸಿ ಇದೆಲ್ಲವನ್ನೂ ನನಗೆ ಕೊಟ್ಟಿರುವರು. ನಾನು ಇದನ್ನು ನೈವೇದ್ಯದ ಬದಲಿಗೆ ನಿನಗೆ ಸಮರ್ಪಿಸುತ್ತಿರುವೆ' ಸ್ವೀಕರಿಸಿ ಹರಸು ದೇವಾ.

**ವಿನಾಯಕ:** ನಿನ್ನ ಸಾಧನೆ ಎಂದೆಯಲ್ಲ ಅದೇನೆಂದು ಸ್ವಲ್ಪ ವಿವರವಾಗಿ ಹೇಳಪ್ಪ, ನಾನೂ ಅರ್ಥಮಾಡಿಕೊಳ್ಳುತ್ತೇನೆ.

**ಈಶ್ವರಚಂದ್ರ:** ದೇವಾ ನಿನಗೇ ತಿಳಿದಿರುವಂತೆ ನಾನು ಈ ಊರಿನಲ್ಲಿನ ಶಾಲೆಯಲ್ಲಿ ಅಧ್ಯಾಪಕ. ಅಲ್ಲಿ ನಾನು 20 ವರ್ಷಗಳಿಂದ ಬೋಧಿಸುತ್ತಿರುವೆ ಅದನ್ನು ಗುರುತಿಸಿದ ಸರ್ಕಾರ ನನ್ನನ್ನು ಈ ಪ್ರಶಸ್ತಿಗೆ ಆರಿಸಿದೆ.



**ವಿನಾಯಕ:** ಅದು ಸರಿ. ನಿನ್ನಂತೆಯೇ ಇನ್ನೂ ನಾಲ್ಕಾರು ಶಿಕ್ಷಕರಿರುವಾಗ ನಿನ್ನದೇನು ವಿಶೇಷ?

**ಈಶ್ವರಚಂದ್ರ:** ಪ್ರಭೂ ನಿಧಾನವಾಗಿ ಆಲಿಸು ನನ್ನ ವಿಶೇಷಗಳನ್ನು ಅರುಹುತ್ತೇನೆ.

1. ನಾನು ಪ್ರತಿನಿತ್ಯ ಶಾಲೆಗೆ ಸರಿ ಸಮಯಕ್ಕೆ ಹೋಗುತ್ತೇನೆ.
2. ನಾನು ತರಗತಿಗೆ ಎಂದೂ ತಡವಾಗಿ ಹೋದವನಲ್ಲ.
3. ಅಂದಂದು ಮಾಡಬೇಕಾದ ಪಾಠ ಪ್ರವಚನಗಳ ಟಪ್ಪಣಿ ತಯಾರಿಮಾಡಿಕೊಂಡು ಹೋಗುತ್ತೇನೆ.
4. ಬಹಳ ಕಡಿಮೆ ರಜೆಯನ್ನು ಪಡೆದಿದ್ದೇನೆ..
5. ಮುಖ್ಯೋಪಾಧ್ಯಾಯರು ಹೇಳಿದ ಕೆಲಸಗಳನ್ನೆಲ್ಲಾ ಅಚ್ಚುಕಟ್ಟಾಗಿ ಮಾಡಿದ್ದೇನೆ.

ಓರ್ವ ಅಧ್ಯಾಪಕನಿಗೆ ಇದಕ್ಕಿಂತ ಹೆಚ್ಚೇನುಬೇಕು. ಅದಕ್ಕಾಗಿ ನನಗೆ ಪ್ರಶಸ್ತಿ.

**ವಿನಾಯಕ:** ಈ ನಿನ್ನ ಪಟ್ಟಿ ಕೇಳಿ ಸಂತೋಷವೇನೋ ಆಗಿದೆ ಮಗೂ, ಆದರೆ ಸಮಾಧಾನ ಆಗಲಿಲ್ಲ. ಓರ್ವ ಅಧ್ಯಾಪಕನಾಗಿ ನೀನು ಪಡೆಯುತ್ತಿರುವ ಸಂಬಳಕ್ಕೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವೆ. ಆದರೆ...

**ಈಶ್ವರಚಂದ್ರ:** ಪ್ರಭೂ, ಅದೇನು ಆದರೆ, ಎಂದು ಮಾತುನಿಲ್ಲಿಸಿದೆ. ನಿನ್ನ ಮಾತನ್ನು ಪೂರ್ತಿಮಾಡು ದೇವಾ.

**ಪುಟ 9 ಕ್ಕೆ ➢**

➢ ಪುಟ 3 ರಿಂದ..... ಸರ್. ಎಂ. ವಿ...

ವಿಶ್ವೇಶ್ವರಯ್ಯನವರು ದಾರ್ಶನಿಕ ದಕ್ಷ ಆಡಳಿತಗಾರ ಎಂಬುದನ್ನು ಅವರ ಆಡಳಿತಾವಧಿಯ ಮಹೋನ್ನತ ಕಾರ್ಯಗಳು ಅನಾವರಣಗೊಳಿಸುತ್ತವೆ ಹಾಗೂ ವಿಶ್ವೇಶ್ವರಯ್ಯನವರ ಚಿಂತನೆಗಳು ಜನಮಾನಸದಲ್ಲಿ ಇಂದಿಗೂ ಜೀವಂತವಾಗಿ ಪೋಷಿಸಲ್ಪಟ್ಟಿವೆ. ಮೈಸೂರಿನ ಹೊಸ ಅರಮನೆ, ಪುರಭವನ, ಕೆ.ಆರ್. ಆಸ್ಪತ್ರೆ, ಕೃಷ್ಣಸಾಗರ ಅಣೆಕಟ್ಟು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಬ್ಯಾಂಕ್, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದವುಗಳ ಜನಕ ವಿಶ್ವೇಶ್ವರಯ್ಯ.

ಕೈಗಾರಿಕೀಕರಣ ಇಲ್ಲದೆ ಅವನತಿ ಎಂದು ಸಾರಿದ ಅವರ ವ್ಯವಸಾಯ ಮತ್ತಿತರ ಗ್ರಾಮೀಣ ಚಟುವಟಿಕೆಗಳ ಅಭಿವೃದ್ಧಿಯನ್ನು ನಿರ್ಲಕ್ಷಿಸಲಿಲ್ಲ. ಅಂದಿನ ಕಾಲಘಟ್ಟದ ಬ್ರಿಟಿಷ್ ಸರ್ಕಾರಕ್ಕೆ ಭಾರತೀಯರು ಕೈಗಾರಿಕೀಕರಣ ಪ್ರಕ್ರಿಯೆಗೆ ಒಳಗಾಗುವುದು ಸಹಿಸಲಾರದ ವಿಷಯವಾಗಿತ್ತು. ಆದ ಕಾರಣದಿಂದಲೇ ವಿಶ್ವೇಶ್ವರಯ್ಯನವರು ಮೈಸೂರು ಬ್ಯಾಂಕ್ ಸ್ಥಾಪಿಸುವುದರ ಮೂಲಕ 'ಔದ್ಯೋಗಿಕ ಕ್ರಾಂತ್ರಿ'ಗೆ ರಹದಾರಿ ನಿರ್ಮಿಸಿದರು. ಇದರ ಫಲಶ್ರುತಿಯಂತೆ ಭಾರತೀಯ ಉದ್ಯಮಿಗಳ ವರ್ಗವನ್ನು ಸೃಷ್ಟಿಮಾಡಿದರು. ಮೈಸೂರು ವಿಶ್ವವಿದ್ಯಾಲಯ' ಸ್ಥಾಪನೆ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗೂ 'ಉನ್ನತ ಶಿಕ್ಷಣ' ಸಿಗಬೇಕೆಂದು ಕನಸು ಕಂಡು ಅದನ್ನು ನನಸು ಮಾಡಿ ನಾಡಿನಾದ್ಯಂತ 'ಅಕ್ಷರಕ್ರಾಂತಿ' ಯ ಮಹಾ ಪುರುಷರೆನಿಸಿದರು.

'ಮೈಸೂರು ಸ್ಯಾಂಡಲ್ ಸೋಪ್ ಫ್ಯಾಕ್ಟರಿ' ಸರ್ಕಾರಿ ಸೋಪ್ ಫ್ಯಾಕ್ಟರಿ ಸ್ಥಾಪಿಸುವುದರ ಮೂಲಕ 'ಶ್ರೀಗಂಧದ ನಾಡಿನ ಪರಿಮಳವನ್ನು ಜಗತ್ತಿಗೆ ಪಸರಿಸಿದ ಕೀರ್ತಿ ಭಾರತಾಂಬೆಯ ಹೆಮ್ಮೆಯ ಸುಪುತ್ರ ವಿಶ್ವೇಶ್ವರಯ್ಯನವರಿಗೆ ಸಲ್ಲುತ್ತದೆ. ವಿಶ್ವೇಶ್ವರಯ್ಯ ಯುನಿವರ್ಸಿಟಿ ಕಾಲೇಜು ಆಫ್ ಎಂಜಿನಿಯರಿಂಗ್ (ಯುವಿಸಿಇ) ಸ್ಥಾಪಿಸಿ ತಂತ್ರಜ್ಞಾನದ ಜ್ಞಾನವನ್ನು ಎತ್ತರಕ್ಕೆ ತಲುಪಿಸಿ ಸಾಮಾಜಿಕ ಕಳಕಳಿಯನ್ನು ಮೆರೆದವರು ವಿಶ್ವೇಶ್ವರಯ್ಯನವರು.

ಅಂದಿನ ಕಟ್ಟುನಿಟ್ಟಿನ ಸಾಮಾಜಿಕ ರಚನಾ ವ್ಯವಸ್ಥೆಯಲ್ಲೂ ಮಹಿಳೆಗೆ ವಿದ್ಯಾಭ್ಯಾಸ ದೊರಕಬೇಕೆಂಬ ಅತೀವ ಹಂಬಲದೊಂದಿಗೆ 1917ರಲ್ಲಿ ಮೈಸೂರಿನ ಮಹಾರಾಣಿ ಕಾಲೇಜನ್ನು ಪದವಿ ಕಾಲೇಜಾಗಿ ಉನ್ನತಿಗೇರಿಸಿದರು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೂಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ, ಸಕ್ಕರೆ ಕಾರ್ಖಾನೆ, ಔಷಧಿ ತಯಾರಿಕಾ ಘಟಕ, ಗಂಧದ ಎಣ್ಣೆ ಹೀಗೆ ನೂರಾರು ಕಾರ್ಖಾನೆಗಳು, ಘಟಕಗಳು ಮೈಸೂರು ಸಂಸ್ಥಾನದಲ್ಲಿ ಸ್ಥಾಪನೆಗೊಂಡು ಮೈಸೂರು ಸಂಸ್ಥಾನವನ್ನು ಅಂದಿನ ಕಾಲಘಟ್ಟದ ಅತ್ಯಂತ ಸಮೃದ್ಧ, ಸುಭಿಕ್ಷ, ಸಂಪದ್ಭರಿತ ನಾಡನ್ನಾಗಿ ಮನ್ವಂತರಗೊಳಿಸುವಲ್ಲಿ ವಿಶ್ವೇಶ್ವರಯ್ಯನವರ ಪಾತ್ರ ಮಹತ್ತರವಾದದ್ದು.

ಬೆಂಗಳೂರು– ಮೈಸೂರು ನಡುವಿನ ರೈಲು ಮಾರ್ಗ, ಬಟ್ಕಳದ ಬಂದರು, ಮೈಸೂರು ಸಂಸ್ಥಾನದ ನಾಗರೀಕ ಸೇವಾ ಪರೀಕ್ಷೆ, ಶಿವಮೊಗ್ಗದ ಜೋಗ್‌ಫಾಲ್ಸ್‌ನ ಶರಾವತಿ ಜಲ ವಿದ್ಯುತ್ ಯೋಜನೆ, ಅವರ ಚಿಂತನೆ ಮತ್ತು ದೂರದೃಷ್ಟಿಯ ಫಲಶ್ರುತಿಗಳೇ ಆಗಿದೆ. ಶಿಕ್ಷಣ, ನೀರಾವರಿ, ಆರೋಗ್ಯ, ಸಹಕಾರ, ಕೈಗಾರಿಕೆ, ಅಭಿವೃದ್ಧಿಯ ಕ್ಷೇತ್ರಗಳಿಗೆ ಅವರ ಕೊಡುಗೆ ಅಪಾರವಾದದ್ದು. ದಿನಂಪ್ರತಿ 15 ಗಂಟೆಗಳಿಗೂ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸುತ್ತಿದ್ದ ಅವರ ಪರಿಪಾಠ ನಮಗೆಲ್ಲ ಮಾದರಿಯಾಗಬೇಕು. ಕಾರ್ಯಗೌರವ, ಶ್ರಮ ಗೌರವದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂಬುದನ್ನು ಸಾಧಿಸಿದ ಅಪ್ರತಿಮ ಛಲಗಾರ ವಿಶ್ವೇಶ್ವರಯ್ಯನವರು. ಸರ್ಕಾರದ ಕೆಲಸ ನಿರ್ವಹಿಸುವಾಗ ಸರ್ಕಾರದ ಮೇಣದ ಬತ್ತಿ ಬಳಸಿದರೆ, ಸ್ವಂತ ಕೆಲಸ ಮಾಡುವಾಗ ಸ್ವಂತ ಮೇಣದ ಬತ್ತಿ ಬಳಸಿದ ಪ್ರಾಮಾಣಿಕ ವ್ಯಕ್ತಿತ್ವ ವಿಶ್ವೇಶ್ವರಯ್ಯನವರದ್ದು. ಶಿಸ್ತಿಗೆ ಮತ್ತೊಂದು ಹೆಸರೇ ವಿಶ್ವೇಶ್ವರಯ್ಯ ಎಂದು ನಾಡಿನ ಗಣ್ಯಾತಿ ಗಣ್ಯರಿಂದ ಅಭಿನಂದನೆಗೆ ಭಾಜನರಾಗಿದ್ದ ಅವರು 'ಸ್ವಯಂ ವಸ್ತ್ರ ಸಂಹಿತೆ' ರೂಪಿಸಿಕೊಂಡಿದ್ದರು. ಸದಾ ಸೂಟು, ಬೂಟು, ತಲೆಯ ಮೇಲೆ ಮೈಸೂರು ಪೇಟದಾರಿಯಾಗಿರುತ್ತಿದ್ದರು.

ರಾಷ್ಟ್ರಕವಿ ಕುವೆಂಪು ವಿಶ್ವೇಶ್ವರಯ್ಯನವರನ್ನು 'ಯಂತ್ರರ್ಷಿ' ಎಂದೇ ಬಣ್ಣಿಸಿದ್ದಾರೆ. ಸರ್.ಎಂ.ವಿ.ಯವರ ಕಛೇರಿಯೆಂದರೆ ಅದು ಶಿಸ್ತಿನ ಆಗರ ಎನ್ನುತ್ತಾರೆ ಮಾಸ್ತಿಯವರು.

ಡಿವಿಜಿ, ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ ಮೊದಲ್ಗೊಂಡು ಅನೇಕ ಸಾಹಿತ್ಯದ ದಿಗ್ಗಜರೂ ಹಾಗೂ ರಾಷ್ಟ್ರೀಯ ನಾಯಕರೊಂದಿಗೆ ಸಾಕಷ್ಟು ಒಡನಾಟ ಹೊಂದಿದ್ದರು. ವಿಶ್ವೇಶ್ವರಯ್ಯನವರು. ರಾಷ್ಟ್ರಪಿತ ಮಹಾತ್ಮಾಗಾಂಧಿಯೊಡನೆ ಪತ್ರ ವ್ಯವಹಾರ ಮಾಡುವುದರ ಮೂಲಕ ರಾಷ್ಟ್ರೀಯ ವಿಚಾರಗಳಿಗೆ ಸ್ಪಂಧಿಸಿದ ಮಹಾನ್‌ಚೇತನ ವಿಶ್ವೇಶ್ವರಯ್ಯ.

ವಿಶ್ವೇಶ್ವರಯ್ಯನವರ ನಿಸ್ವಾರ್ಥ, ಪ್ರಾಮಾಣಿಕ ಸೇವೆಯನ್ನು ಗುರುತಿಸಿ ಬ್ರಿಟಿಷ್ ಸರ್ಕಾರ 'ಸರ್' ಪದವಿ ನೀಡಿ ಗೌರವಿಸಿದೆ. ಭಾರತ ಸರ್ಕಾರ 1955ರಲ್ಲಿ ರಾಷ್ಟ್ರದ ಪರಮೋಚ್ಚ ಗೌರವವಾದ 'ಭಾರತರತ್ನ' ನೀಡಿ ಭಾರತ ಮಾತೆಯ ಹೆಮ್ಮೆಯ ಪುತ್ರನನ್ನು ಗೌರವಿಸಿ, ಧನ್ಯತೆ ಹೊಂದಿದೆ. "Memories of my working life" ಎಂಬುದು ಸರ್. ಎಂ. ವಿ. ಯವರ ಆತ್ಮಚರಿತ್ರೆಯಾಗಿದೆ.

ಬದುಕಿರುವಾಗಲೇ ದಂತಕಥೆಯಾಗಿದ್ದ ಶತಾಯುಷಿ ಸರ್ ಎಂ ವಿಯವರು 1962, ಏಪ್ರಿಲ್ 14 ರಂದು ಇಹಲೋಕ ತ್ಯಜಿಸಿದರೂ ಸಹ ಅವರು ಹಾಕಿಕೊಟ್ಟ ಅಭಿವೃದ್ಧಿಯ ಪಥ ಶಿಸ್ತಿನ ಜೀವನ, ದೇಶಭಕ್ತಿ, ನಿಸ್ವಾರ್ಥ ಬದುಕು ಹಾಗೂ ಅವರ ದಾರ್ಶನಿಕದಕ್ಷ ಆಡಳಿತದ ಕಾರ್ಯವೈಖರಿ ಇಂದಿನ ಯುವಪೀಳಿಗೆಗೆ ಮಾದರಿಯಾಗಬೇಕಾಗಿದೆ.

ಸರ್. ಎಂ.ವಿ. ಯವರ ಗೌರವಾರ್ಥ ಅವರು ಹುಟ್ಟಿದ ದಿನ ಸೆಪ್ಟಂಬರ್ 15 ರನ್ನು ಎಂಜಿನಿಯರ್ಸ್ ದಿನಾಚರಣೆ ಎಂದು ದೇಶದಾದ್ಯಂತ ಆಚರಿಸಿ ಮಹಾನ್ ಚೇತನಕ್ಕೆ ಗೌರವ ಸಮರ್ಪಿಸಲಾಗುತ್ತದೆ.

●

# 34 ನೇ ಪ್ರತಿಭಾ ಪುರಸ್ಕಾರ ಬೆಂಗಳೂರು ಉತ್ತರ ಜಿಲ್ಲೆ

ಅಂಕ ಗಳಿಸುವುದು ಜೀವನದ ಒಂದು ಚಿಕ್ಕ ಭಾಗವಷ್ಟೆ ಆದರೆ ಸಂಸ್ಕಾರ ಮತ್ತು ಸಮಾಜ ಸೇವೆ ನಮ್ಮ ಜೀವನದ ಅವಿಭಾಜ್ಯ ಅಂಗ. ಮಾತೃಭೂಮಿಯ ಬಗ್ಗೆ ನಮಗೆ ಸದಾ ಗೌರವ ಇರಬೇಕು. ಚಾರಿತ್ರ್ಯ ನಿರ್ಮಾಣ ಸಾಧ್ಯವಾದರೆ ಮಾನವ ದೇವನಾಗಬಲ್ಲನೆಂದು ಗೌರವ ಅತಿಥಿಗಳಾದ ಪೂಜ್ಯ ಮಂಗಲನಾಥಾನಂದಜಿ ಮಹಾರಾಜ್ ಜಿ ರಾಮಕೃಷ್ಣ ಮಠ ಬೆಂಗಳೂರು ಇವರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ಜಿಲ್ಲಾ ಘಟಕವು ದಿನಾಂಕ 28.7.19 ರಂದು ಬೆಂಗಳೂರಿನ ಹಿಮಾಂಶುಜ್ಯೋತಿ ಕಲಾಪೀಠದಲ್ಲಿ ಆಯೋಜಿಸಿದ್ದ 34ನೇ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು.

ಮಾನ್ಯ ಉಪನಿರ್ದೇಶಕರು, ಬೆಂಗಳೂರು ಉತ್ತರ ಜಿಲ್ಲೆ ಇವರು ಮಾತನಾಡಿ, ಇದೊಂದು ನಿಮಗೆ ಮೊದಲ ಮೆಟ್ಟಿಲು ಮುಂದೆ ಇನ್ನೂ ನೀವು ಸಾಧಿಸಬೇಕಾದದ್ದು ಬಹಳಷ್ಟಿದೆ. 'ಯೋಗ' ವನ್ನು ನಮ್ಮ ಪ್ರಧಾನಮಂತ್ರಿಗಳು ಇಡೀ ಪ್ರಪಂಚಕ್ಕೆ ಪರಿಚಯಿಸಿ ಭಾರತದ ಸಂಸ್ಕೃತಿಯನ್ನು ಎತ್ತಿ ಹಿಡಿದರು ಎಂದು ನುಡಿದರು.

ಹಿಮಾಂಶು ಶಾಲೆಯ ನಿರ್ದೇಶಕರಾದ ಶ್ರೀ ಬಿ. ವಿ. ವಿಜಯಕುಮಾರ್‌ರವರು ಮಕ್ಕಳಿಗೆ ತಮ್ಮ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಕರೆ ನೀಡಿದರು.

ಶ್ರೀಮತಿ ಪುಷ್ಪಾಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಜಿಲ್ಲಾ ಅಧ್ಯಕ್ಷರಾದ ಶ್ರೀ ಎಸ್.ಜಿ ತಾಂಬೆಯವರು ಎಲ್ಲ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು. ರಾಜ್ಯಕೋಶಾಧ್ಯಕ್ಷರಾದ ಶ್ರೀ.ಜೆ.ಎಂ ಜೋಶಿಯವರು ಪ್ರಾಸ್ತಾವಿಕ ನುಡಿಯಲ್ಲಿ ಸಂಘದ ಚಟುವಟಿಕೆಗಳನ್ನು ಪರಿಚಯಿಸಿದರು. ಶ್ರೀಮತಿ ವಾಸುಕಿಯವರು ಪ್ರತಿಜ್ಞಾ ಬೋಧನೆ ಮಾಡಿದರು. ಸಂಘದ ಹಿರಿಯರಾದ ಶ್ರೀ ಜಿ ಎಸ್. ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ನಾರಾಯಣಭಟ್ಟರು ದಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಕಾರ್ಯದರ್ಶಿಯಾದ ಶ್ರೀ ಗಂಗಪ್ಪನವರು ವಂದನಾರ್ಪಣೆ ಸಲ್ಲಿಸಿದರು ಶ್ರೀಮತಿ ಜ್ಯೋತಿ ಮಹೇಶ್‌ರವರ ವಂದೇ ಮಾತರಂನೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಸುಮಾರು 200 ಶಾಲಾ ಪ್ರಥಮಿಗರು ಹಾಗೂ 50 ಶಿಕ್ಷಕರ ಮಕ್ಕಳಿಗೆ ಸನ್ಮಾನಿಸಲಾಯಿತು.

**ವರದಿ : ಶ್ರೀ ಎಸ್. ಜಿ. ತಾಂಬೆ**

---

➢ ಪುಟ 5 ರಿಂದ..... **ಅನರ್ಘ್ಯ ರತ್ನಗಳು...**

ಧ್ವಜ ಹಾರಿಸುವಲ್ಲಿ ಸಫಲಳಾಗಿದ್ದಳು. ಅಲ್ಲಿಂದ ಹಿಂತಿರುಗುವಾಗ ಆಕೆ ಕಂಡದ್ದು ಗುಂಟೇಟಿನಿಂದ ಮೃತನಾಗಿದ್ದ ಪತಿಯ ದೇಹವನ್ನು. ಬ್ರಿಟಿಷರ ವಿರುದ್ಧದ ಹೋರಾಟವನ್ನು ದೇಶವು ಸ್ವಾತಂತ್ರ್ಯ ಪಡೆಯುವವರೆಗೂ ಆ ಧೀರ ಮಹಿಳೆ ಮುಂದುವರಿಸಿದ್ದಳು.

**ಕನಕಲತಾಬರುವ:** 'ಮೃತ್ಯುಬಹಿನೇ' ಎಂಬ ಕ್ರಾಂತ್ರಿಕಾರಿಗಳ ತಂಡದ ಸದಸ್ಯಳಾದ ಈಕೆ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಗುಂಡೇಟಿನಿಂದ ಹತ್ಯೆಗೀಡಾದಾಗ ಕೇವಲ 17ರ ಯುವತಿ. ಅಸ್ಸಾಂನ ಪೊಲೀಸ್ ಸ್ಟೇಷನ್ ಒಂದರ ಬಳಿ ತ್ರಿವರ್ಣಧ್ವಜವನ್ನು ಹಾರಿಸುವ ಸಲುವಾಗಿ ಕೆಲವು ನಿಶ್ಶಸ್ತ್ರ ಮಹಿಳಾತಂಡವೊಂದನ್ನು ಕಟ್ಟಿಕೊಂಡು ಹೊರಟಿದ್ದಳು.

ಪೊಲೀಸರ ನಿಷೇಧಾಜ್ಞೆ ಮೀರಿ ಮುನ್ನಡೆಯುತ್ತಿದ್ದಾಗ ಗುಂಡೇಟಿನಿಂದ ಕೆಳಗೆ ಬಿದ್ದಳು. ಆಕೆಯ ಕಾರ್ಯವನ್ನು ಪೂರ್ತಿ ಮಾಡಲು ಧ್ವಜ ಹಿಡಿದು ಮುನ್ನಡೆದ ಮುಕುಂದ ಕಾಕೋಟಿ ಸಹ ಗುಂಡೇಟಿನಿಂದ ಮೃತನಾದನು. ಕನಕಲತ 'ಬೀರ್‌ಬಾಲ' ಎಂದು ಅಮರಳಾದಳು. ಅಸ್ಸಾಂನ ದೊರಾಂಗಬಾರಿ ಹಳ್ಳಿಯಲ್ಲಿ ಜನಿಸಿದ ಕನಕಲತಾ ತಾಯಿಯನ್ನು ಕಳೆದುಕೊಂಡಾಗ 5 ವರ್ಷದ ಹುಡುಗಿ. 13 ರ ವಯಸ್ಸಿನಲ್ಲೇ ಪಿತೃವಿಯೋಗವೂ ಆಗಿತ್ತು. 3ನೇ ತರಗತಿಯಲ್ಲಿದ್ದಾಗಲೇ ಶಾಲೆ ಬಿಟ್ಟು ಹೊರಬಂದು ಒಡಹುಟ್ಟಿದ ಕಿರಿಯರನ್ನು ರಕ್ಷಿಸುವ ಹೊಣೆ ಹೊತ್ತ ದಿಟ್ಟ ಬಾಲಕಿಯಾಗಿದ್ದಳು. ಕನಕಲತಾ.

**ರಾಜಕುಮಾರಿ ಗುಪ್ತ:** ಸಮಾಜ ಸುಧಾರಕಿ ಮತ್ತು ಗಾಂಧೀಯವರ ಅನುಯಾಯಿಯಾಗಿದ್ದ ರಾಜಕುಮಾರಿ ಗುಪ್ತ ಕ್ಯಾಬಿನೆಟ್ ದರ್ಜೆಯ ಮೊದಲ ಭಾರತೀಯ ಮಹಿಳಾ ಮಂತ್ರಿಯಾಗಿದ್ದವಳು. ಪಂಜಾಬ್‌ನ ಜಲಿಯನ್ ವಾಲಾಬಾಗ್ ದುರ್ಘಟನೆಗೆ ಆಕೆಯನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಲು ಪ್ರೇರಣೆ ನೀಡಿತ್ತು. ರಾಜ ಮನೆತನದಲ್ಲಿ ಜನಿಸಿದ ಈಕೆಯ ಕುಟುಂಬ ಕಪುರ್ತಲದ ಆಡಳಿತವನ್ನು ನಿರ್ವಹಿಸಿತ್ತು. ಆರೋಗ್ಯ ಮತ್ತು ಕ್ರೀಡಾ ವಿಭಾಗ ನಿರ್ವಹಿಸಿದ್ದ ರಾಜಕುಮಾರಿ ಗುಪ್ತ ಎ.ಎಂ.ಸಿ ಸ್ಥಾಪನೆಗೆ ಮುಖ್ಯ ಕಾರಣಳಾಗಿದ್ದಳು.

**ಭೋಗೇಶ್ವರಿ ಪುಕನಾನಿ:** 60 ವರ್ಷದ ಈ ಧೀರಮಹಿಳೆ ತನ್ನ ಮೊಮ್ಮಗಳು ರತ್ನಮಾಲಾ ಜೊತೆಸೇರಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದ ಕ್ಯಾಪ್ಟನ್ ಫಿನಿಶ್ ಎಂಬಾತನನ್ನು ಧ್ವಜಸ್ಥಂಬದಿಂದಲೇ ಹೊಡೆದು ಹತ್ಯೆಮಾಡಿದ್ದಳು. ಆಗಲೇ ಗುಂಡೇಟಿನಿಂದ ಮೃತಳಾದಳು. ತನ್ನ ಆರುಮಂದಿ ಪುತ್ರರನ್ನು, ಇಬ್ಬರು ಹೆಣ್ಣು ಮಕ್ಕಳನ್ನು ಸ್ವಾತಂತ್ರ್ಯ ಹೋರಾಟದ ಕಾರ್ಯದಲ್ಲಿ ತೊಡಗಿಸಿದ್ದ ವೀರಮಾತೆಯಾಗಿದ್ದಳು.

ಇವರೆಲ್ಲರ ಧೀರವ್ಯಕ್ತಿತ್ವದ ಪರಿಚಯವಾಗುತ್ತಿದ್ದಂತೆ ಮೈ ರೋಮಾಂಚನಗೊಳ್ಳುವುದರೊಂದಿಗೆ ಮನಸ್ಸಿನಲ್ಲಿ ದೇಶಪ್ರೇಮದ ಭಾವ ತುಂಬಿ ತುಳುಕುತ್ತದೆ. ಇವರ ತ್ಯಾಗ, ಬಲಿದಾನಗಳ ವಿವರ ಹನಿಗಣ್ಣಾಗುವಂತೆ ಮಾಡುತ್ತದೆ. ಇಂದಿನ ಸ್ವಾತಂತ್ರ್ಯೋತ್ಸವದ ಸಂಭ್ರಮದ ಆಚರಣೆಗೆ ಕಾರಣಕರ್ತರಾದ ಈ ಎಲ್ಲಾ ಸ್ತ್ರೀ ರತ್ನಗಳಿಗೆ ಒಂದು ದೀರ್ಘದಂಡ ಪ್ರಣಾಮ. •

➢ ಪುಟ 6 ರಿಂದ..... ವಿನಾಯಕನ ಅಶರೀರವಾಣಿ...

**ವಿನಾಯಕ:** ಮಗೂ ಓರ್ವ ಶಿಕ್ಷಕನ ಕೆಲಸ ನೀನು ಹೇಳಿದ 5 ಅಂಶಗಳಿಗೆ ಸೀಮಿತವಲ್ಲ. ನೀನೋರ್ವ ಪ್ರಾಮಾಣಿಕ. ಶಿಕ್ಷಕ. ಆದರೆ ನೀನು ಆದರ್ಶ ಶಿಕ್ಷಕನಾಗಬೇಕು.

**ಈಶ್ವರಚಂದ್ರ:** ಹಾಗೆಂದರೇನು? ದೇವಾ

**ವಿನಾಯಕ:** ನೋಡು ಮಗು, ಓರ್ವ ಶಿಕ್ಷಕನೆಂದರೆ ಒಂದಿಷ್ಟು ವಿಷಯಗಳನ್ನು ವಿದ್ಯಾರ್ಥಿಯ ತಲೆಗೆ ತುಂಬುವುದಲ್ಲ. ವಿದ್ಯಾರ್ಥಿಯ ತಲೆ ಒಂದು ಬಿಂದಿಗೆ ಅಲ್ಲ. ಅವನಿಗೆ ತಲೆಯೊಂದಿಗೆ ಹೃದಯವೂ ಇದೆ. ಆ ತಲೆಯಲ್ಲಿ ಬುದ್ಧಿಯೂ ಇದೆ. ಅದಕ್ಕೆ ಶಿಕ್ಷಣ ನೀಡುವುದಕ್ಕೆ ಸಂಸ್ಕಾರ ಎನ್ನುತ್ತೇವೆ. ಇದನ್ನೇ ಮೌಲ್ಯಶಿಕ್ಷಣ ಎನ್ನುವುದು. ಮೌಲ್ಯ ಶಿಕ್ಷಣದಿಂದ ಓರ್ವ ವಿದ್ಯಾರ್ಥಿ ಉತ್ತಮ ಪ್ರಜೆಯಾಗಿ ರೂಪುಗೊಳುತ್ತಾನೆ. ಇಂಥ ಉತ್ತಮ ಪ್ರಜೆಗಳಿಂದ ಕೂಡಿದ ದೇಶವೇ ಸುಖೀ ಸಮೃದ್ಧಿ ಪಡೆದ ದೇಶವಾಗುತ್ತದೆ.

**ಈಶ್ವರಚಂದ್ರ:** ಪ್ರಭೂ, ಮೌಲ್ಯಗಳು, ಸಂಸ್ಕಾರ ಎಂದೆಲ್ಲಾ ಹೇಳಿದೆ ಇದನ್ನು ಸ್ವಲ್ಪ ವಿವರವಾಗಿ ತಿಳಿಸುವೆಯಾ ?

**ವಿನಾಯಕ:** ನೋಡಪ್ಪಾ ಈಶ್ವರಚಂದ್ರ, ನಾವು ಜೀವನದಲ್ಲಿ ಯಾವ ರೀತಿ ನಡೆದುಕೊಳ್ಳಬೇಕು, ಹೇಗೆ ನಡೆದುಕೊಂಡರೆ ನಮಗೆ ಇಹ–ಪರಗಳಲ್ಲಿ ನೆಮ್ಮದಿ, ಸುಖ, ಶಾಂತಿ ಸಿಗುತ್ತದೋ ಅದಕ್ಕೆ ಮೌಲ್ಯಗಳು ಎನ್ನುತ್ತಾರೆ. ಇದು ಸಾರ್ವಕಾಲಿಕ ಹಾಗೂ ಸಾರ್ವದೇಶಿಕ.

**ಈಶ್ವರಚಂದ್ರ:** ಅಂಥ, ಮೌಲ್ಯಗಳು ಯಾವುವೂ ಎಂದು ತಿಳಿಸುವೆಯಾ ದೇವಾ?

**ವಿನಾಯಕ:** ಖಂಡಿತ, ನಿನ್ನಂಥ ಶಿಕ್ಷಕರು ಅದನ್ನು ತಿಳಿದಿರಲೇಬೇಕು. ಮೊದಲನೆಯದಾಗಿ ವೈಯುಕ್ತಿಕ ಮೌಲ್ಯ. ಎರಡನೆಯದು ಕೌಟುಂಬಿಕ ಮೌಲ್ಯ, ಮೂರನೇಯದು ಸಾಮಾಜಿಕ ಮೌಲ್ಯ, ನಾಲ್ಕನೇಯದು ರಾಷ್ಟ್ರೀಯ ಮೌಲ್ಯ ಮತ್ತು ಕೊನೆಯದಾಗಿ ಆಧ್ಯಾತ್ಮಿಕ ಮೌಲ್ಯ. ನಿಮ್ಮಂಥ ಶಿಕ್ಷಕರು ವಿದ್ಯಾರ್ಥಿಗಳಿಗೆ ಕೇವಲ ಪಠ್ಯ ಪುಸ್ತಕದಲ್ಲಿರುವುದನ್ನು ಬೋಧಿಸುದಲ್ಲ. ಅವರ ವ್ಯಕ್ತಿತ್ವವನ್ನು ರೂಪಿಸಬೇಕು. ಅವರು ಮೌಲ್ಯಯುಕ್ತ ಪ್ರಜೆಗಳಾಬೇಕು. ಅಂತ ಪ್ರಜೆಗಳನ್ನು ತಯಾರಿಸುವ ಶಿಕ್ಷಕ ನೀನಾಗಬೇಕು. ಆಗ ಮಾತ್ರ ನಿನ್ನ ಜೀವನಕ್ಕೆ ಸಾರ್ಥಕ್ಯ. ಹೋಗು ಮಗೂ ಅಂಥ ಶಿಕ್ಷಕನಾಗು, ನಿನಗೆ ನನ್ನ ಆಶೀರ್ವಾದವಿದೆ ಎಂದ ವಿನಾಯಕ.

**ಈಶ್ವರಚಂದ್ರ:** ಅದ್ಯಾವುದೋ 5 ಮೌಲ್ಯಗಳ ಬಗ್ಗೆ ಹೇಳಿದೆಯಲ್ಲ ಅದನ್ನು ಸ್ವಲ್ಪ ವಿಷದಪಡಿಸು ಪ್ರಭೂ.

**ವಿನಾಯಕ:** ಈಶ್ವರಚಂದ್ರ, ಅದರಲ್ಲಿನ ಪ್ರತಿಮೌಲ್ಯವನ್ನು ವಿಸ್ತರಿಸಲು ತುಂಬಾ ಸಮಯಬೇಕಾಗುತ್ತದೆ. ಅದನ್ನು ಇನ್ನೊಮ್ಮೆ ಹೇಳುತ್ತೇನೆ. ಈಗ ನೀನು ಪ್ರವಾಸದ ಆಯಾಸದಲ್ಲಿರುವೆ. ಹೋಗಿ ಬಾ ಎಂದು ವಿನಾಯಕ ಅಂತರ್ಧಾನನಾದ.

ದೀರ್ಘದಂಡ ಹಾಕಿದ್ದ ಈಶ್ವರಚಂದ್ರನಿಗೆ ಎಚ್ಚರವಾಯ್ತು. ಎದ್ದು ತನ್ನ ಚೀಲ ಹೆಗಲಿಗೇರಿಸಿ ಪ್ರಶಸ್ತಿಫಲಕ ಹಿಡಿದು, ನಡೆದ ಸಂಗತಿಯನ್ನೆಲ್ಲಾ ಮೆಲುಕು ಹಾಕುತ್ತಾ, ವಿನಾಯಕನಿಗೆ ಮನಸ್ಸಿನಲ್ಲೇ ವಂದಿಸುತ್ತಾ, ಭಗವಂತಾ ನಿನ್ನಾಶಯದಂತೆಯೇ ನಡೆದು ನಾನು ಶ್ರೇಷ್ಠ ಶಿಕ್ಷಕನಾಗುವ ಸಂಕಲ್ಪ ಮಾಡುವೆನು ಎಂದು ಮನೆ ಕಡೆ ಹೊರಟನು. ●

# ಶಿಕ್ಷಕರು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಲಿ

ಮಕ್ಕಳ ಉಜ್ವಲ ಭವಿಷ್ಯರೂಪಿಸುವ ಶಿಕ್ಷಕರು ಉತ್ತಮ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಮಾಜಿ ಸಂಸದ ಬಸವರಾಜ ಪಾಟೀಲ್ ಸೇಡಂ ಹೇಳಿದರು. ಪಟ್ಟಣದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ತಾಲೂಕಿನ ಶಿಕ್ಷಕರಿಗೆ ಶುಕ್ರವಾರ ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ನಾಗರೀಕರ ಪಾತ್ರ ವಿಷಯಕುರಿತ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಕ್ಕಳ ದಾರಿ ದೀಪವಾಗುವ ನಿಟ್ಟಿನಲ್ಲಿ ಶಿಕ್ಷಕರು ಕ್ರಿಯಾಶೀಲರಾಗಬೇಕು. ರಾಷ್ಟ್ರದ ಉತ್ಥಾನಕ್ಕೆ ಶಿಕ್ಷಕರ ಪಾತ್ರ ಮಹತ್ವದಾಗಿದೆ. ಮಕ್ಕಳಲ್ಲಿ ಭಯ, ಆತಂಕಗಳನ್ನು ದೂರ ಮಾಡಿ ಆತ್ಮವಿಶ್ವಾಸ ಹೆಚ್ಚಿಸಬೇಕು. ಸ್ವಯಂ ಶಿಸ್ತು, ಉತ್ತಮಕಲ್ಪನಾ ಶಕ್ತಿ, ವಿಮರ್ಶಾತ್ಮಕ ಚಿಂತನೆ ಬೆಳೆಸಬೇಕು ಎಂದು ಸಲಹೆ ನೀಡಿದರು.

ಮಕ್ಕಳಲ್ಲಿ ಜೀವನಕೌಶಲ್ಯ ಬೆಳೆಸಲು ಶಿಕ್ಷಕರು ಶ್ರಮಿಸಬೇಕಿದೆ. ಈ ನಿಟ್ಟಿನಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳು ತೊಡಗುವಂತೆ ಶಿಕ್ಷಕರು ಮತ್ತು ಪಾಲಕರು ಉತ್ತೇಜಿಸಬೇಕು. ಮಕ್ಕಳ ಕೈಗೆ ಮೊಬೈಲ್‌ಗಳ ಬದಲಾಗಿ ಪಂಚತಂತ್ರ, ಚಂದಮಾಮ, ತೆನಾಲಿ ರಾಮಕೃಷ್ಣರ ಕಥೆ ಮತ್ತು ರಾಮಾಯಣ– ಮಹಾಭಾರತದಂತಹ ಪುಸ್ತಕಗಳನ್ನು ನೀಡಿಅವರ ಮನಸ್ಸನ್ನು ಅರಳುವಂತೆ ಮಾಡಬೇಕಿದೆ ಎಂದರು.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕಾರ್ಯಾಧ್ಯಕ್ಷ ಡಾ॥ ಎಚ್.ಎನ್.ಪಿ ವಿಠಲ್, ಪ್ರೌಢಶಾಲೆ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಓಬಯ್ಯ, ರಾಷ್ಟ್ರೋತ್ಥಾನ ಪ್ರೌಢಶಾಲೆ ಮುಖ್ಯಶಿಕ್ಷಕ ಆರ್.ಕೊಟ್ರಪ್ಪ, ಮಾಧ್ಯಮಿಕ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಎ. ಗುಂಡಾಚಾರ್ ಸೇರಿ ತಾಲೂಕಿನ 65 ಶಿಕ್ಷಕರು ಭಾಗವಹಿಸಿದ್ದರು. ಸಂಜೆ ವಿದ್ಯಾರ್ಥಿ ನಿಲಯದಲ್ಲಿ ರಾಷ್ಟ್ರ ನಿರ್ಮಾಣದ ನಾಗರಿಕರ ಪಾತ್ರ ವಿಷಯದ ಬಗ್ಗೆ ವಿಶೇಷ ಸಂವಾದ ಕಾರ್ಯಕ್ರಮ ನಡೆಸಲಾಯಿತು. ಯುವಕರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಪೋಷಕರು ಭಾಗವಹಿಸಿದ್ದರು.

- **ಒಮ್ಮೆ ಅವನ ಪವಿತ್ರನಾಮದ ಶಕ್ತಿಯಲ್ಲಿ ನಂಬಿಕೆ ಹುಟ್ಟಿ ಅದನ್ನು ಪದೇ ಪದೇ ಉಚ್ಚರಿಸುವುದಕ್ಕೆ ಮನಸ್ಸಾದ ಮೇಲೆ ಭಕ್ತಿ, ವಿವೇಕ, ಸಾಧನೆಗಳಾವುವೂ ಅವಶ್ಯಕವಿಲ್ಲ. ಸಂಶಯ ಮಾಯವಾಗುವುದು. ಅವನ ನಾಮದ ಬಲದಿಂದ ದೇವರನ್ನೇ ಹೊಂದುವನು.**
- **ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು ಹೇಳುತ್ತಾರೆ. 'ನೋಡು, ನೀನು ಭಜನೆ ಮತ್ತು ಸಂಗೀತವನ್ನು ಪ್ರೀತಿಸಬೇಕು. ಸಂಗೀತದ ಮೂಲಕವೂ ಭಗವಂತನನ್ನು ಸೇರಬಹುದು ಎಂಬುದನ್ನು ನೀನು ಎಂದೆಂದಿಗೂ ಮನಸ್ಸಿನಲ್ಲಿಟ್ಟುಕೋ. ಸಂಗೀತವು 'ಶಬ್ದಬ್ರಹ್ಮ'ವೇ ಆಗಿದೆ. ಒಬ್ಬ ವ್ಯಕ್ತಿ ಧ್ಯಾನದ ಮೂಲಕ ಇದನ್ನು ಅನುಭವಿಸುತ್ತಾನೆ.**

**– ಶ್ರೀರಾಮಕೃಷ್ಣರು**

# ಶಿಕ್ಷಕರ ಸಾಂದರ್ಭಿಕ ರಜೆ 15 ದಿನಗಳೇ ಇರಲಿ

ಶಿಕ್ಷಕರ ಸಾಂದರ್ಭಿಕ ರಜೆ ದಿನಗಳನ್ನು (ಸಿಎಲ್) 15 ರಿಂದ 10 ದಿನಗಳಿಗೆ ಇಳಿಸಿರುವ ನಿರ್ಧಾರ ಸೂಕ್ತವಲ್ಲ. ಈ ಮೊದಲಿದ್ದಂತೆ 15 ಸಿಎಲ್‌ಗಳನ್ನೇ ಮುಂದುವರೆಸಬೇಕು ಎಂದು ಶಿಕ್ಷಣ ಕ್ಷೇತ್ರವನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು ಮತ್ತು ಶಿಕ್ಷಕರ ಸಂಘಗಳ ಮುಖ್ಯಸ್ಥರ ಸಭೆ ಆಗ್ರಹಿಸಿದೆ.

ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ವತಿಯಿಂದ ಶಾಸಕರ ಭವನದಲ್ಲಿ ಶನಿವಾರ ಆಯೋಜಿಸಲಾಗಿದ್ದ 'ಶೈಕ್ಷಣಿಕ ಅವಧಿ ಹಾಗೂ ರಜೆ' ಒಂದು ಚರ್ಚೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ.

ಮಕ್ಕಳ ವಾರ್ಷಿಕ ಕಲಿಕಾ ಅವಧಿಯ ದಿನಗಳು ಮನೋವಿಜ್ಞಾನದ ಆಧಾರದಲ್ಲಿ ನಿಗದಿಯಾಗಬೇಕು, ಈ ದಿಸೆಯಲ್ಲಿ ಮನೋವಿಜ್ಞಾನಿಗಳನ್ನು ಒಳಗೊಂಡ ಸಮಗ್ರ ಅಧ್ಯಯನ ನಡೆಯಬೇಕು. ಶಿಕ್ಷಕರ ಮೇಲಿನ ಒತ್ತಡದ ಪ್ರಮಾಣ ಮತ್ತು ಅವರು ಎಷ್ಟು ಕೆಲಸ ನಿರ್ವಹಿಸಬೇಕು ಎಂಬುದನ್ನು ಪರಾಂಬರಿಸಿದ ವರದಿ ಸಿದ್ಧಪಡಿಬೇಕು ಎಂದು ಸಭೆ ನಿರ್ಣಯಿಸಿತು.

ವಿಧಾನ ಪರಿಷತ್ ಸದಸ್ಯರು ಹಾಗೂ ಕರ್ನಾಟಕರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಧ್ಯಕ್ಷರಾದ ಅರುಣ ಶಹಾಪೂರರವರು ಮಾತನಾಡಿ, ಶೈಕ್ಷಣಿಕ ಹಾಗೂ ರಜೆಗಳ ಅವಧಿ ನಿರ್ಣಯವು, ಆಳುವ ಸರ್ಕಾರದ ಜೊತೆಗಿನ ಬೇಡಿಕೆ–ನೀಡಿಕೆಯ ವಿಷಯವಾಗಬಾರದು. ಇದೊಂದು ಸೂಕ್ಷ್ಮ ವಿಚಾರವಾಗಿದ್ದು ವೈಜ್ಞಾನಿಕ ಆಧಾರದಲ್ಲಿ ಅಧ್ಯಯನ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ವಿಧಾನಪರಿಷತ್ ಸದಸ್ಯ ವೈ. ಎ. ನಾರಾಯಣ್ ಅವರು ಅನ್ಯ ಕಾರ್ಯಗಳನ್ನು ಶಿಕ್ಷಕರಿಗೆ ನೀಡುವುದನ್ನು ತಡೆಗಟ್ಟಿ ಶಿಕ್ಷಕರ ಕತ್ತೆಚಾಕರಿ ನಿಲ್ಲಿಸಬೇಕು. ಯಾರನ್ನು ಖುಷಿಪಡಿಸಲು ಈ ಯೋಜನೆಯನ್ನು ಮುಂದು ವರೆಸಲಾಗುತ್ತದೆ ಎಂದು ಪ್ರಶ್ನಿಸಿದರು. ಹಾಲಿ 45 ರಿಂದ 50 ಯೋಜನೆಗಳು ಅನಗತ್ಯ ಹೊರೆಯಾಗಿವೆ. ಶಿಕ್ಷಕರ ವಿಶ್ರಾಂತಿಯ ಅವಧಿ ಕುಂಠಿತವಾಗಿದೆ. ಇದರಿಂದ ಮಕ್ಕಳ ಕಲಿಕಾ ಪ್ರಗತಿಗೂ ಧಕ್ಕೆಯಾಗಿದೆ' ಎಂದು ಕಳವಳ ವ್ಯಕ್ತಪಡಿಸಿದರು.


'ಶಿಕ್ಷಕರ ಸಾಂದರ್ಭಿಕ ರಜೆ 15 ದಿನಗಳೇ ಇರಲಿ'

**ಮಕ್ಕಳು ರಜೆ ಅನುಭವಿಸಲಿ:** ಮಕ್ಕಳು ಉಲ್ಲಾಸದಿಂದ ಕಲಿಕೆಯಲ್ಲಿ ತೊಡಗಲು ರಜೆಗಳು ಅವಶ್ಯಕ, ವೃಥಾ ಅವರನ್ನು ಓದುವ ಕ್ರಿಯೆಯಲ್ಲಿ ತೊಡಗಿಸುವುದು, ಹೊರೆ ಹೆಚ್ಚಿಸುವುದು, ಒಳ್ಳೆಯ ಲಕ್ಷಣವಲ್ಲ ಎಂದು ನಿಮಾನ್ಸ್‌ನ ವೈದ್ಯರು ಮತ್ತು ಮಕ್ಕಳ ಕಲಿಕಾ ವಿಷಯದ ತಜ್ಞರೂ ಆದ ಡಾ. ರಾಜೇಂದ್ರ ಪ್ರತಿಪಾದಿಸಿದರು.

ಪರಿಷತ್ ಸದಸ್ಯರಾದ ಶ್ರೀಕಂಠೇ ಗೌಡ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಕೆ ಮಂಜುನಾಥ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಪ್ರೊ. ಸಂದೀಪ ಬೂದಿಹಾಳ, ಕೆಆರ್‌ಎಂಎಸ್‌ಎಸ್‌ನ ಪ್ರಧಾನ ಕಾರ್ಯದರ್ಶಿ ಚಿದಾನಂದ ಪಾಟೀಲ, ಎಬಿಆರ್‌ಎಸ್‌ಎಂ ಮಹಿಳಾ ಕಾರ್ಯದರ್ಶಿ ಮಮತಾ ಡಿ. ಕೆ., ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ ಗಂಗಾಧರಾಚಾರ್ಯ, ರಾಜ್ಯ ಕಾರ್ಯದರ್ಶಿ ವೃಷಬೇಂದ್ರ ಸ್ವಾಮಿ, ರಾಜ್ಯ ಉಪಾಧ್ಯಕ್ಷ, ಬಿ.ಎಚ್ ವರದರಾಜ ಶಿಕ್ಷಣ ಇಲಾಖೆಯ ಅಧಿಕಾರಿಗಳಾದ ಬಸವರಾಜ ಸೋಮಣ್ಣನವರ, ಗೋಪಾಲಕೃಷ್ಣ, ಮಂಗಳಾ ಮತ್ತು ಶಿಕ್ಷಕರ ಸಂಘಗಳ ರಾಜ್ಯದ ವಿವಿಧ ಜಿಲ್ಲೆ ಮುಖಂಡರು ಸಭೆಯಲ್ಲಿ ಹಾಜರಿದ್ದರು.


ಶಿಕ್ಷಕರ ಸಾಂಧರ್ಭಿಕ ರಜೆ 15 ದಿನಗಳೇ ಇರಲಿ


ಜನಪ್ರತಿನಿಧಿಗಳು, ಶಿಕ್ಷಕರ ಸಂಘಗಳ ಮುಖ್ಯಸ್ಥರ ಸಭೆಯಲ್ಲಿ ಆಗ್ರಹ

15 ಸಿಎಲ್ ಮುಂದುವರಿಸಿ

# ಚಿತ್ರ ಸುದ್ದಿಗಳು




'ಶೈಕ್ಷಣಿಕ ಅವಧಿ ಹಾಗೂ ರಜೆ' – ಒಂದು ಚರ್ಚೆ ಕಾರ್ಯಕ್ರಮ



ಎಬಿಆರ್‌ಎಸ್‌ಎಂನ ರಾಷ್ಟ್ರೀಯ ಪದಾಧಿಕಾರಿಗಳ ನಿಯೋಗವು ಮಾನವ ಸಂಪನ್ಮೂಲ ಸಚಿವರಾದ ಡಾ. ರಮೇಶ್ ಪೋಕ್ರಿಯಾಲ್ ಅವರನ್ನು ಭೇಟಿ ಮಾಡಿ ಪ್ರಾಥಮಿಕ ಶಾಲಾ ಶಿಕ್ಷಕರ ಸಮಸ್ಯೆಗಳ ಕುರಿತು ಮನವಿ ಪತ್ರ ನೀಡಿದರು.




ಸದಸ್ಯತಾ ಅಭಿಯಾನ







ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಮನವಿ




ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ಜಿಲ್ಲಾ ಘಟಕದ ವತಿಯಿಂದ ದಿನಾಂಕ 28.7.19 ರಂದು ಬೆಂಗಳೂರಿನ ಹಿಮಾಂಶುಜ್ಯೋತಿ ಕಲಾಪೀಠದಲ್ಲಿ ಆಯೋಜಿಸಿದ್ದ 34ನೇ ಪ್ರತಿಭಾ ಪುರಸ್ಕಾರ ಸಮಾರಂಭ

MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026
Date of Publishing : 17-08-2019 Date of Posting 20h or 21st of every month Posted at Periodical Rate

# 34 ನೇ ಪ್ರತಿಭಾ ಪುರಸ್ಕಾರ ಬೆಂಗಳೂರು ದಕ್ಷಿಣ ಜಿಲ್ಲೆ






ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ದಕ್ಷಿಣ ಜಿಲ್ಲೆಯ 34ನೇ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಅಗಸ್ಟ್ 18, 2019, ಭಾನುವಾರ ವಿಜಯ ಟೀಚರ್ಸ್ ಕಾಲೇಜು, ಜಯನಗರ, ಬೆಂಗಳೂರಿನಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಜಸ್ಟಿಸ್ ಪಿ.ಎಸ್.ದಿನೇಶ್ ಕುಮಾರ್, ಗೌರವಾನ್ವಿತ ನ್ಯಾಯಾಧೀಶರು, ಕರ್ನಾಟಕದ ಉಚ್ಚನ್ಯಾಯಾಲಯ. ಡಾ. ಕೆ. ಎನ್. ಶ್ರೀಧರ, ಯೂರಾಲಜಿಸ್ಟ್, ರಂಗದೊರೈ ಆಸ್ಪತ್ರೆ, ಶಂಕರಪುರ, ಬೆಂಗಳೂರು, ಗೌರವ ಅತಿಥಿಗಳಾಗಿ ಮೇಜರ್ ತೇಜಸ್ಮಿತ, ಆಫೀಸರ್ ಟ್ರೈನಿಂಗ್ ಅಕಾಡೆಮಿ, ಚೆನ್ನೈ.ಶ್ರೀ ರವಿ ಸುಬ್ರಹ್ಮಣ್ಯ, ಶಾಸಕರು, ಬಸವನಗುಡಿ ಕ್ಷೇತ್ರ. ಡಾ॥ ಗಿರಿಧರ್ ಉಪಾಧ್ಯಾಯ, ಪ್ರಾಧ್ಯಾಪಕರು, ಕಿಮ್ಸ್ ಕಾಲೇಜು, ಬೆಂಗಳೂರು.ಶ್ರೀ ಅನಿಲ್ ಶೆಟ್ಟಿ, ಅಧ್ಯಕ್ಷರು, 'ಸರ್ಕಾರಿ ಶಾಲೆ ಉಳಿಸಿ' ಆಂದೋಲನ ಸಮಿತಿ. ಸಂಸ್ಥಾಪಕರು, ಪೀಸ್ ಆಟೋ, ಬೆಂಗಳೂರು ಭಾಗವಹಿಸಿದ್ದರು.

ಅಧ್ಯಕ್ಷತೆಯನ್ನು ಶ್ರೀ ಸಂದೀಪ ಬೂದಿಹಾಳ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಕರ್ನಾಟಕ. ವಹಿಸಿದ್ದರು. ಕಾರ್ಯಕ್ರಮದಲ್ಲಿ ಬೆಂಗಳೂರಿನ 2018–19 ನೇ ಸಾಲಿನ ಎಸ್.ಎಸ್.ಎಲ್.ಸಿ ಶಾಲಾ ಪ್ರಥಮಿಗರಿಗೆ (300 ವಿದ್ಯಾರ್ಥಿಗಳು) ಸನ್ಮಾನಿಸಿ ಗೌರವಿಸಲಾಯಿತು, ಕಾರ್ಯಕ್ರಮದಲ್ಲಿ 1000 ಕ್ಕೂ ಅಧಿಕ ಶಿಕ್ಷಕ ವರ್ಗ ಹಾಗೂ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ಹಿಂದಿ ಭಾಷಾ ಶಿಕ್ಷಕ ಸಂಘದ ರಾಜ್ಯ ಘಟಕದ ಅಧ್ಯಕ್ಷರಾಗಿ ನೂತನವಾಗಿ ಆಯ್ಕೆಯಾದ ಶ್ರೀ ಡಿ. ಎಮ್. ರಾಠೋಡ ಗುರುಗಳಿಗೆ ಅಭಿನಂದಿಸಿ ಸನ್ಮಾನಿಸಲಾಯಿತು. ಗಣ್ಯರಾದ ಶ್ರೀ ಡಿ. ವಿ. ಶಿಕ್ಕೆರಿ ಜಿಲ್ಲಾ ಅಧ್ಯಕ್ಷರು ಮಹಾ ಮಂಡಲ, ಬಾಗಲಕೋಟೆ ಹಾಗು ರಾಜ್ಯ ವಿಷಯ ಸಮೂಹ ಪ್ರಮುಖ **KRMSS** ಶ್ರೀ ಆರ್. ಜಿ. ಸನ್ನಿ. ಜಿಲ್ಲಾ ಅಧ್ಯಕ್ಷರ ಮಾಧ್ಯಮಿಕ ಶಿಕ್ಷಕ ಸಂಘ. ಬಾಗಲಕೋಟೆ ಶ್ರೀ ಪ್ರಶಾಂತ ಹೊಸಮನಿ ಜಿಲ್ಲಾ ಗೌರವ ಅಧ್ಯಕ್ಷರು ಹಿಂದಿ ಭಾಷಾ ಶಿಕ್ಷಕ ಸಂಘ. ಬಾಗಲಕೋಟೆ ಶ್ರೀ ಅವಿನಾಶ ರ. ಹಿರೇಮಠ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಹಿಂದಿ ಭಾಷಾ ಶಿಕ್ಷಕ ಸಂಘ. ಬಾಗಲಕೋಟೆ ಹಾಗೂ ಶ್ರೀ ಆರ್. ಎಫ್ ಸನ್ನಿ ಉಪಸ್ಥಿತರಿದ್ದರು.



IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com